ಕೊಡಗು ಜಿಲ್ಲೆಯ ಹಾಡಿಗಳ ಸಾಂಸ್ಕೃತಿಕ ಅಧ್ಯಯನ

ಪಿಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ವೆಂಕಟೇಶ್. ವಿ

ಮಾರ್ಗದರ್ಶಕರು

ಪ್ರೊ. ಸೋಮಣ್ಣ

ಪ್ರಾಧ್ಯಾಪಕರು

ಎಸ್.ವಿ.ಪಿ ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ– ೫೭೪೧೯೯

೨೦೨೦

ಕೊಡಗು ಜಿಲ್ಲೆಯ ಹಾಡಿಗಳ ಸಾಂಸ್ಕೃತಿಕ ಅಧ್ಯಯನ

ಪ್ರಸ್ತಾವನೆ

೧. ಅಧ್ಯಯನದ ವಿಷಯ, ವ್ಯಾಪ್ತಿ ಮತ್ತು ಉದ್ದೇಶ

೨. ಪ್ರಸ್ತುತ ಅಧ್ಯಯನದ ಮಹತ್ವ

೩. ಇದುವರೆಗೆ ನಡೆದಿರುವ ಸಮೀಕ್ಷೆ

೪. ಅಧ್ಯಯನದ ವಿಧಾನ ಕ್ರಮ

ಅಧ್ಯಾಯ೧. **ಕೊಡಗಿನ ಹಾಡಿಗಳು – ಸಾಂಸ್ಕೃತಿಕ ಸ್ವರೂಪ**

೧.೧ ಕೊಡಗಿನ ಭೌಗೋಳಿಕ ಪರಿಚಯ

೧.೧.೧ ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯೆ

೧.೧.೨ ದೇವರಕಾಡು

೧.೨ ಹಾಡಿ ಪದದ ಅರ್ಥ

೧.೨.೧ ಹಾಡಿಯ ರಚನೆಯ ಸ್ವರೂಪ

೧.೨.೨ ಹಾಡಿಗಳ ಹೆಸರುಗಳ ಪಟ್ಟಿ

೧.೨.೨.೧ ವಿರಾಜಪೇಟೆ ತಾಲೂಕಿನ ಹಾಡಿಗಳು

೧.೨.೨.೨ ಸೋಮವಾರಪೇಟೆ ತಾಲೂಕಿನ ಹಾಡಿಗಳು

೧.೨.೨.೩ಮಡಿಕೇರಿ ತಾಲೂಕಿನ ಹಾಡಿಗಳು

೧.೨.೩ ಹೆಸರುಗಳ ಹಿನ್ನಲೆ, ಕಾರಣ, ಇತಿಹಾಸ ಮತ್ತು ವೈಶಿಷ್ಟ್ಯ

೧.೩ ಹಾಡಿಗಳ ವರ್ಗೀಕರಣ

೧.೩.೧ ವಿರಾಜಪೇಟೆ ತಾಲೂಕಿನ ಹಾಡಿಗಳು – ಸ್ವರೂಪ ವಿವೇಚನೆ

೧.೩.೨ ಸೋಮವಾರಪೇಟೆ ತಾಲೂಕಿನ ಹಾಡಿಗಳು – ಸ್ವರೂಪ ವಿವೇಚನೆ

೧.೩.೩ ಮಡಿಕೇರಿ ತಾಲೂಕಿನ ಹಾಡಿಗಳು – ಸ್ವರೂಪ ವಿವೇಚನೆ

೧.೩.೪ ಹಾಡಿಗಳ ಸಾಂಸ್ಕೃತಿಕ ಸ್ವರೂಪ – ತೌಲನಿಕ ವಿವೇಚನೆ

ಅಧ್ಯಾಯ೨. **ಹಾಡಿಗಳ ಬುಡಕಟ್ಟುಗಳು – ಸಾಂಸ್ಕೃತಿಕ ಹಿನ್ನೆಲೆ**

೨.೧ ಬುಡಕಟ್ಟು ಪದದ ಅರ್ಥ, ವ್ಯಾಪ್ತಿ ಮತ್ತು ಸ್ವರೂಪ

೨.೧.೧ ಬುಡಕಟ್ಟು ಸಂಸ್ಕೃತಿ

೨.೧.೨ ಬುಡಕಟ್ಟು ಸಮುದಾಯದ ಲಕ್ಷಣಗಳು

೨.೨ ಕೊಡಗು ಜಿಲ್ಲೆಯ ಬುಡಕಟ್ಟುಗಳು

೨.೨.೧ ಕುಡಿಯರು– ಮಲೆಕುಡಿಯರು

೨.೨.೨ ಎರವರು

೨.೨.೩ ಮೇದರು

೨.೨.೪ ಜೇನುಕುರುಬರು

೨.೨.೫ ಬೆಟ್ಟಕುರುಬರು/ ಕಾಡುಕುರುಬರು

೨.೩ ಹಾಡಿಗಳ ಬುಡಕಟ್ಟು ಜನರ ಸಾಂಪ್ರದಾಯಿಕ ಕುಲಕಸುಬುಗಳು

೨.೩.೧ ಕುಮರಿ ಬೇಸಾಯ

೨.೩.೨ ಜೇನುಕುರುಬರ ಕುಲಕಸುಬುಗಳು

೨.೩.೨.೧ ಬೇಟೆ

೨.೩.೩ ಬೆಟ್ಟಕುರುಬರ ಕುಲಕಸುಬುಗಳು

೨.೩.೩.೧ ಬೇಟೆ

ಅಧ್ಯಾಯ ೩. **ಹಾಡಿ ಮತ್ತು ಜಾನಪದ: ಸಂಸ್ಕೃತಿಯ ಅನಾವರಣ**

೩.೧ ಹಾಡಿ: ಮೌಖಿಕ ಸಾಹಿತ್ಯ

೩.೧.೧ ಹಾಡು

೩.೧.೨ ಒಗಟು

೩.೧.೩ ಗಾದೆ

೩.೧.೪ ಐತಿಹ್ಯ ಕಥೆಗಳು

೩.೧.೪.೧ ಜೇನುಕುರುಬರ ಐತಿಹ್ಯ ಕಥೆಗಳು

೩.೧.೪.೨ ಬೆಟ್ಟಕುರುಬರ ಐತಿಹ್ಯ ಕಥೆಗಳು

೩.೨ ಹಾಡಿ: ಭೌತಿಕ ಸಂಸ್ಕೃತಿ

೩.೨.೧ ಸಾಂಪ್ರದಾಯಿಕ ಆಹಾರ ಪದ್ಧತಿ

೩.೨.೧.೧ ಜೇನುಕುರುಬರಆಹಾರ ಪದ್ಧತಿ

೩.೨.೧.೨ ಬೆಟ್ಟಕುರುಬರಆಹಾರ ಪದ್ಧತಿ

೩.೨.೨ ಭೌತಿಕ ವಸ್ತುಗಳು

೩.೩ ಹಾಡಿ: ಆಚರಣೆಗಳು ಮತ್ತು ಸಂಪ್ರದಾಯಗಳು

೩.೩.೧ ಜೀವನಾವರ್ತನ ಆಚರಣೆಗಳು

೩.೩.೧.೧ ಜೇನುಕುರುಬರ ಜೀವನಾವರ್ತನ ಆಚರಣೆಗಳು

೩.೩.೧.೨ ಬೆಟ್ಟಕುರುಬರ ಜೀವನಾವರ್ತನ ಆಚರಣೆಗಳು

೩.೩.೨ ವಾರ್ಷಿಕಾವರ್ತನ ಆಚರಣೆಗಳು

೩.೩.೨.೧ ಹಬ್ಬಗಳು

(ಅ) ಜೇನುಕುರುಬರ ಹಬ್ಬಗಳು

(ಆ) ಬೆಟ್ಟಕುರುಬರ ಹಬ್ಬಗಳು

೩.೪ ಹಾಡಿ: ಪ್ರದರ್ಶನ ಕಲೆಗಳು

ಅಧ್ಯಾಯ ೪. **ಹಾಡಿ ಮತ್ತು ಆಧುನಿಕ ಸಂದರ್ಭ**

೪.೧ ಆರ್ಥಿಕ ಸ್ಥಿತಿಗತಿ

೪.೨ ಸಾಮಾಜಿಕ ಸ್ಥಿತಿಗತಿ

೪.೩ ಶೈಕ್ಷಣಿಕ ಸ್ಥಿತಿಗತಿ

೪.೪ ಹಾಡಿ: ಸಾಂಸ್ಕೃತಿಕ ಪಲ್ಲಟದ ನೆಲೆಗಳು

ಅಧ್ಯಾಯ ೫. **ಉಪಸಂಹಾರ: ಅಧ್ಯಯನದ ಫಲಿತಗಳು**

ಅನುಬಂಧಗಳು

೫.೧ ಸಾಂಸ್ಕೃತಿಕ ಪದಕೋಶ

೫.೨ ಕ್ಷೇತ್ರಕಾರ್ಯಕ್ಕೆ ಬಳಸಿದ ಪ್ರಶ್ನಾವಳಿಯ ಮಾದರಿ

೫.೩ ಸಂಶೋಧನ ಸಹಭಾಗಿಗಳ/ ವಕ್ತೃಗಳ ವಿವರ

೫.೪ ಪರಾಮರ್ಶನ ಸಾಹಿತ್ಯ

೫.೫ ಛಾಯಾಚಿತ್ರಗಳು/ನಕ್ಷೆ

ಕೊಡಗು ಜಿಲ್ಲೆಯ ಹಾಡಿಗಳ ಸಾಂಸ್ಕೃತಿಕ ಅಧ್ಯಯನ

ಪ್ರಸ್ತಾವನೆ

ಕೊಡಗಿನ ಮೂಲನಿವಾಸಿಗಳಾಗಿರುವ ಜೇನುಕುರುಬ, ಕಾಡುಕುರುಬ, ಎರವ, ಕುಡಿಯ, ಮೇದ, ಸೋಲಿಗ ಮುಂತಾದ ಬುಡಕಟ್ಟು ಸಮುದಾಯಗಳ ಜನರು ಕೊಡಗಿನ ಬೆಟ್ಟ-ಗುಡ್ಡ, ಕಾಡುಗಳಲ್ಲಿ ನೆಲೆಸಿದ್ದಾರೆ.ಈ ಬುಡಕಟ್ಟುಗಳು ತಮ್ಮದೇ ಆದ ಸಾಂಸ್ಕೃತಿಕ ಪರಂಪರೆಗಳನ್ನು ಹೊಂದಿವೆ. ಕೊಡಗು ಜಿಲ್ಲೆಯ ಬಹುತೇಕ ಅರಣ್ಯಗಳಲ್ಲಿ ಬುಡಕಟ್ಟು ಜನರು ವಾಸಿಸುತ್ತಿದ್ದಾರೆ.ಇವರು ವಾಸಿಸುವ ವಾಸಸ್ಥಳವನ್ನು **'ಹಾಡಿ'** ಎಂದು ಕರೆಯುತ್ತಾರೆ. ಇವರು ಶಿಕ್ಷಣ, ಆರೋಗ್ಯ ಹಾಗೂ ವಿವಿಧ ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಈ ಹಾಡಿಗಳಲ್ಲಿ ವಾಸಿಸುವ ಜನರು ತಮ್ಮದೇ ಆದ ಜೀವನ ಕ್ರಮ ಹಾಗೂ 'ಲೋಕದೃಷ್ಟಿ'ಯನ್ನು ಹೊಂದಿದ್ದಾರೆ.

'ಹಾಡಿ' ಎಂದರೆ ಜೇನುಕುರುಬರು, ಬೆಟ್ಟಕುರುಬರು, ಎರವರು ಇವರೇ ಮೊದಲಾದ ಬುಡಕಟ್ಟುಗಳ ಜನರು ಅಥವಾ ಗಿರಿಜನರು ಕಾಡಿನಲ್ಲಿ ತಾವು ವಾಸಿಸಲು ನಿರ್ಮಿಸಿಕೊಂಡಂತಹ ಗುಡಿಸಲುಗಳ ಸಮೂಹ. ಗ್ರಾಮ ಮತ್ತು ಹಳ್ಳಿಗಳಿಂದ ದೂರ ಇರುವ, ಗಿಡ ಮರಗಳ ನಡುವೆ ಹುಲ್ಲು ಅಥವಾ ಮರದ ಎಲೆಗಳನ್ನು ಜೋಪಡಿಯನ್ನಾಗಿ ಮಾಡಿಕೊಂಡು ವಾಸಿಸುತ್ತಿರುವ ಈ ಜನರ ಮನೆಗಳ ಸಮೂಹವನ್ನು 'ಹಾಡಿ' ಎನ್ನುತ್ತಾರೆ. ಗ್ರಾಮದ ವ್ಯಾಪ್ತಿಯಿಂದ ಈ 'ಹಾಡಿ'ಗಳು ಹೊರಗೆ ಇವೆ. ಹಾಡಿಯಲ್ಲಿ ವಾಸಿಸಲು ಇಚ್ಛಿಸುವ ಜನರು ತಮ್ಮ 'ಹಾಡಿ'ಯನ್ನು ಕಟ್ಟಿಕೊಳ್ಳಲು ಸುರಕ್ಷಿತ ಜಾಗವನ್ನು ಆರಿಸಿಕೊಳ್ಳುತ್ತಾರೆ. "ಹಾಡಿ ಕಟ್ಟುವ ಮುನ್ನ ಆ ಜಾಗದಲ್ಲಿ ಕಲ್ಲುಗಳ ಮೇಲೆ ಕಲ್ಲುಗಳನ್ನು ಇಟ್ಟು ಪೂಜೆ ಮಾಡಿ ಹಿಂತಿರುಗುತ್ತಾರೆ. ಮೂರು ದಿನಗಳ ನಂತರ ಬಂದು ನೋಡಿದಾಗ ಈ ಕಲ್ಲು ಏನಾದರೂ ಕೆಳಗೆ ಬಿದ್ದಿದ್ದರೆ ಅಲ್ಲಿ ಹಾಡಿ ನಿರ್ಮಿಸುವುದು ಬೇಡವೆಂಬುದು ಅವರ ನಂಬಿಕೆ". (ಲಕ್ಷ್ಮೀಪತಿ ಕೋಲಾರ: ೨೦೧೪: ಪುಟ ೧೫) ನಂತರದಲ್ಲಿ ಇವರು ಆ ಸ್ಥಳದಲ್ಲಿ ೨೦ ರಿಂದ ೩೦ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ.ಕಾಡಿನ ಬಿದಿರು, ಕೊಂಬೆಗಳ ತಡಿಕೆಯ ಮೇಲೆ ಎಲೆಯ ಚಾವಣಿ, ಮಣ್ಣಿನ ನೆಲ, ಚಕ್ರಾಕಾರದ ಗೋಡೆಯನ್ನು ನಿರ್ಮಿಸಿ ಅದರ ಮೇಲೆ ಶಂಕುವಿನಾಕಾರದ ಛಾವಣಿಯನ್ನು ಕಟ್ಟಿಕೊಂಡಿರುತ್ತಾರೆ.ಗುಡಿಸಲಿನ ಒಳಗೆ ಪ್ರವೇಶ ಮಾಡಲು ಒಬ್ಬರು ಹೋಗುವಷ್ಟು ಜಾಗವನ್ನು ಬಿಟ್ಟಿರುತ್ತಾರೆ. ಹೀಗೆ ಕಟ್ಟಿಕೊಂಡ ಮನೆಗಳ ಸಮೂಹವನ್ನು **'ಹಾಡಿ'** ಎಂದು ಕರೆಯುತ್ತಾರೆ.

ಹಾಡಿಗಳು ಬೇರೆ ಬೇರೆ ಸಮುದಾಯಕ್ಕೆ ತಕ್ಕಂತೆ ಭಿನ್ನವಾಗಿರುತ್ತವೆ ಉದಾ: ಎರವರ ಹಾಡಿ ಮತ್ತು ಕುರುಬರ ಹಾಡಿ; ಅವುಗಳ ರಚನೆಯಲ್ಲಿ ಕೂಡ ವ್ಯತ್ಯಾಸಗಳಿವೆ. ಒಂದೊಂದು ಹಾಡಿಯಲ್ಲಿ ಕನಿಷ್ಠ ಪಕ್ಷ ೨೦ ರಿಂದ ೩೦ ಕುಟುಂಬಗಳು, ಕೆಲವೊಮ್ಮೆ ಅದಕ್ಕೂ ಹೆಚ್ಚಿನ ಸಂಖ್ಯೆಯ ಕುಟುಂಬಗಳು ವಾಸಿಸುತ್ತವೆ. ಹಾಡಿಗಳನ್ನು ಸೂಕ್ಷ್ಮವಾಗಿ ಎರಡು ರೀತಿಯಾಗಿ ಗುರುತಿಸಬಹುದು. ಒಂದು ಕಾಡಿನಂಚಿನಲ್ಲಿರುವ ಹಾಡಿಗಳು ಮತ್ತೊಂದು ಕಾಡಿನೊಳಗೆ ಇರುವ ಹಾಡಿಗಳು. ಈ ಕಾಡಿನೊಳಗಿರುವ ಹಾಡಿಗಳು ಹುಲ್ಲಿನ ಹೊದಿಕೆಯಿಂದ ಅಥವಾ ಪ್ಲಾಸ್ಟಿಕ್ ಹೊದಿಕೆಯಿಂದ ಕೂಡಿರುತ್ತವೆ. ಕಾಡಿನಂಚಿನಲ್ಲಿ ಪ್ಲಾಸ್ಟಿಕ್ ಹೊದಿಕೆಯ ಗುಡಿಸಲುಗಳಿವೆ. ಇವು ಕಾಡಿನಿಂದ ಹೊರಗೆ ಬಂದು ಜನರು ಪುನರ್ ರೂಪಿಸಿಕೊಂಡಿರುವ 'ಹಾಡಿ'ಗಳು ಎಂಬುದನ್ನು ಗಮನಿಸಬಹುದಾಗಿದೆ.

ಬಹುಮುಖ್ಯವಾಗಿ ಕೊಡಗಿನ ಹಾಡಿಗಳಲ್ಲಿ ಜೀವನ ನಡೆಸುತ್ತಿರುವ ಜೇನುಕುರುಬರು ಮತ್ತು ಬೆಟ್ಟಕುರುಬರು ಈ ಬುಡಕಟ್ಟು ಸಮುದಾಯಗಳ ಸಂಸ್ಕೃತಿ, ಆಚಾರ, ವಿಚಾರ, ನಂಬಿಕೆ, ಸಂಪ್ರದಾಯ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಅಂಶಗಳ ಕಡೆಗೆ ಈ ಅಧ್ಯಯನವು ಗಮನಹರಿಸುತ್ತದೆ. ಈ ಹಿನ್ನಲೆಯಲ್ಲಿ ಹಾಡಿಗಳಲ್ಲಿನ ಜೇನುಕುರುಬ ಮತ್ತು ಬೆಟ್ಟಕುರುಬರು ತಮ್ಮ ಸಂಸ್ಕೃತಿ, ನಂಬಿಕೆ, ಸಂಪ್ರದಾಯ, ಆಚರಣೆ, ಹಬ್ಬ, ಹರಿದಿನ, ಕಟ್ಟು ಕಟ್ಟಳೆಗಳನ್ನು ಶತಮಾನಗಳಿಂದ ಉಳಿಸಿಕೊಂಡು ಬಂದಿರುತ್ತಾರೆ. "ಯಾವುದೇ ಒಂದು ಸಂಸ್ಕೃತಿಗೆ ಪ್ರತ್ಯೇಕ ಅಸ್ತಿತ್ವವಿದ್ದು, ಅದು ಇತರ ಸಂಸ್ಕೃತಿಗಳಿಗಿಂತ ಭಿನ್ನವಾಗಿ ತನ್ನದೇ ಆದ ವಿಶಿಷ್ಟಾಂಶಗಳನ್ನು ಪ್ರಕಟಿಸಿದರೆ, ಅದನ್ನು ಆಯಾ ಸಂಸ್ಕೃತಿಯ 'ಅನನ್ಯತೆ' ಎಂದು ಕರೆಯಬಹುದು.ತಮ್ಮನ್ನು ತಾವು ಗುರುತಿಸಿಕೊಳ್ಳುವ, ತಮ್ಮ ಸ್ವಂತಿಕೆಯನ್ನು ಪ್ರದರ್ಶಿಸಿರುವ ಆ ಮೂಲಕ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳುವ ಒಂದು ಪ್ರಕ್ರಿಯೆ 'ಸಾಂಸ್ಕೃತಿಕ ಅನನ್ಯತೆ'''. (ಅಂಬಳಿಕೆ ಹಿರಿಯಣ್ಣ: ೧೯೯೨: ಪುಟ ೨)ಎಂಬುದಾಗಿ ಅಂಬಳಿಕೆ ಹಿರಿಯಣ್ಣ ಅವರ ಮೇಲಿನ ಮಾತುಗಳು ಕೊಡಗಿನ ದಟ್ಟ ಅರಣ್ಯಗಳಲ್ಲಿ ಹಾಡಿಗಳನ್ನು ನಿರ್ಮಿಸಿಕೊಂಡು ಬದುಕುತ್ತಿರುವ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ನೆಲೆಯಲ್ಲಿ ಮುಖ್ಯವಾಗುತ್ತವೆ.

೧. ಅಧ್ಯಯನದ ವಿಷಯ, ವ್ಯಾಪ್ತಿ ಮತ್ತು ಉದ್ದೇಶ

'ಕೊಡಗು ಜಿಲ್ಲೆಯ ಹಾಡಿಗಳ ಸಾಂಸ್ಕೃತಿಕ ಅಧ್ಯಯನ'ದಲ್ಲಿ ಕೊಡಗಿನಲ್ಲಿ ನೆಲೆಸಿರುವ ಬುಡಕಟ್ಟು ಸಮುದಾಯಗಳಾದ ಎರವರು, ಜೇನುಕುರುಬರು, ಬೆಟ್ಟ(ಕಾಡು)ಕುರುಬರು, ಕುಡಿಯರು, ಮೇದರು, ಸೋಲಿಗರು ವಾಸಿಸುತ್ತಿದ್ದಾರೆ. ಮಹಾಪ್ರಬಂಧದಲ್ಲಿ ಪ್ರಮುಖವಾಗಿ ಜೇನುಕುರುಬರು ಮತ್ತು

ಬೆಟ್ಟಕುರುಬರ ಹಾಡಿಗಳ ಭಿನ್ನ ಸ್ವರೂಪ, ಜನರ ಆಚಾರ-ವಿಚಾರ, ಜೀವನಾವರ್ತನ ಆಚರಣೆಗಳು, ನಂಬಿಕೆ ನಡಾವಳಿಗಳು, ಆರ್ಥಿಕ ಮತ್ತು ಸಾಮಾಜಿಕ, ಶೈಕ್ಷಣಿಕ ಸ್ಥಿತಿಗತಿ ಮುಂತಾದವುಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಲಾಗಿದೆ. ಮುಖ್ಯವಾಗಿ ಕೊಡಗು ಜಿಲ್ಲೆಯ ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ ಮುಂತಾದ ಮೂರು ತಾಲೂಕುಗಳಲ್ಲಿರುವ ಹಾಡಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿಕೊಳ್ಳಲಾಗಿದೆ. ಹಲವು ವರ್ಷಗಳಿಂದ ಕಾಡಿನಲ್ಲೇ ಗುಡಿಸಲುಗಳನ್ನು ಕಟ್ಟಿಕೊಂಡು ಹಾಡಿಗಳನ್ನು ನಿರ್ಮಿಸಿಕೊಂಡು ಬದುಕುತ್ತಿರುವ ಗಿರಿಜನರಲ್ಲಿ ಕೆಲವರು ಇಂದಿಗೂ ಸಂರಕ್ಷಿತ ಅರಣ್ಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಇಂತಹ ಗಿರಿಜನರ ಅರಣ್ಯ ಜೀವನ ಕ್ರಮವನ್ನು ಅಧ್ಯಯನ ನಡೆಸುವ ಉದ್ದೇಶದೊಂದಿಗೆ ಈ ಜನರ ಸಾಂಸ್ಕೃತಿಕ ಬದುಕಿನ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನ ಈ ಮಹಾಪ್ರಬಂಧದ ಉದ್ದೇಶವಾಗಿದೆ.

ಹಾಡಿ ಸಂಸ್ಕೃತಿಯು ಒಳಗೊಳ್ಳುವ ಮೌಖಿಕ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಆಚರಣೆಗಳು ಮತ್ತು ಪ್ರದರ್ಶನಾತ್ಮಕ ಕಲೆಗಳು- ಇವುಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಿ ಜೊತೆಗೆ ಹಾಡಿ ಸಂಸ್ಕೃತಿಯ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ತಿಳಿಯಲು ಹಲವು ಮೂಲಗಳಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ಬಳಸಿಕೊಂಡು ಅಧ್ಯಯನ ನಡೆಸಲಾಗಿದೆ. ಈ ಮೂಲಕ 'ಹಾಡಿ'ಗಳನ್ನು ನಿರ್ಮಿಸಿಕೊಂಡು ಬದುಕುತ್ತಿರುವ ಬುಡಕಟ್ಟು ಜನರ ಲೋಕದೃಷ್ಟಿಯನ್ನು ಅನಾವರಣ ಮಾಡುವ ಗಂಭೀರವಾದ ಪ್ರಯತ್ನವನ್ನು ಮಾಡುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ಕೊಡಗಿನ ಹಾಡಿಗಳ ಸಾಂಸ್ಕೃತಿಕ ಅಧ್ಯಯನ ಮಾಡುವ ಸಂದರ್ಭದಲ್ಲಿ ಕೊಡಗಿನ ಹಾಡಿಗಳಲ್ಲಿ ಜೀವನ ನಡೆಸುತ್ತಿರುವ ಸಮುದಾಯಗಳು ಮತ್ತು ಹಾಡಿಗಳ ಸ್ವರೂಪ, ಒಳರಚನೆಗಳನ್ನು ವಿಶ್ಲೇಷಿಸಲಾಗಿದ್ದು ಹಾಡಿಗಳಲ್ಲಿ ಬದುಕುತ್ತಿರುವ ಈ ಬುಡಕಟ್ಟು ಸಮುದಾಯಗಳ ಜೀವನಾವರ್ತನ ಆಚರಣೆಗಳು, ನಂಬಿಕೆ, ಆರಾಧನೆ, ಕಲೆಗಳು, ಐತಿಹ್ಯಗಳು, ಜನಪದ ಸಾಹಿತ್ಯ, ಕಾವ್ಯ, ಕಥೆ, ಒಗಟು, ಗಾದೆ, ಕುಣಿತಗಳು ಮತ್ತು ಶೈಕ್ಷಣಿಕ, ಆರ್ಥಿಕ ಮತ್ತು ಔದ್ಯೋಗಿಕ ಸ್ಥಿತಿಗತಿ ಕುರಿತಂತೆ ಅಧ್ಯಯನ ನಡೆಸಿ ಸಾಂಸ್ಕೃತಿಕ ಇತಿಹಾಸವನ್ನು ಕಟ್ಟುವ ಪ್ರಯತ್ನವನ್ನು ಈ ಸಂಶೋಧನೆಯು ಹೊಂದಿದೆ.

'ಹಾಡಿಯ ಸಾಂಸ್ಕೃತಿಕ ಅಧ್ಯಯನ'ವು ಹಾಡಿಗಳಿಗಿರುವ ವಿಶಿಷ್ಟ ಸ್ಥಳನಾಮಗಳ ಕಡೆಗೆ ಗಮನಹರಿಸಿ ಹಾಡಿಗಳ ಕುರಿತು ಇರುವ ಐತಿಹ್ಯ ಹಾಗೂ ಹೆಸರುಗಳ ಅನನ್ಯತೆ ಮತ್ತು ಇವುಗಳಿಗಿರುವ ಕಾರಣ ಮೊದಲಾದವುಗಳನ್ನು ಶೋಧಿಸುವುದರೊಂದಿಗೆ ಈ ಐತಿಹ್ಯಗಳ ಮಹತ್ವವನ್ನು ದಾಖಲಿಸುವ ಉದ್ದೇಶವನ್ನು ಹೊಂದಿದೆ. ಕೊಡಗು ಜಿಲ್ಲೆಯ ಹಾಡಿಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಿಗೆ

ಸಂಬಂಧಪಟ್ಟ ಮಾಹಿತಿಗಳ ಸಂಗ್ರಹದ ಜೊತೆಗೆ ಅವುಗಳ ವಿಶ್ಲೇಷಣೆಯ ಕಡೆಗೆ ಹೆಚ್ಚಿನ ಗಮನ ಹರಿಸಿ ಅಧ್ಯಯನ ನಡೆಸಲಾಗಿದೆ. ಹಾಡಿಗಳಲ್ಲಿ ವಾಸಿಸುವ ಜನರು ಆರ್ಥಿಕವಾಗಿ ಹಿಂದುಳಿದಿದ್ದು ಸಾಂಸ್ಕೃತಿಕವಾಗಿ ಮುಂದಿದ್ದಾರೆ ಎನ್ನುವ ಕಾರಣ ಮತ್ತು ಈ ಅವಸ್ಥೆಯ ಸಾಧಕ ಬಾಧಕಗಳನ್ನು ಗುರುತಿಸುವ ಕಡೆಗೆ ಗಮನ ಹರಿಸುವ ಉದ್ದೇಶ ಹೊಂದಿದೆ. ಹಾಡಿಗಳ ವಿನ್ಯಾಸದ ಮಹತ್ವ, ಹಲವು ಹಾಡಿಗಳ ನಡುವೆ ಇರುವ ಅಂತರ್‌ಸಂಬಂಧ, ಕೊಡಗಿನಲ್ಲಿ ನೆಲೆಸಿರುವ ಬುಡಕಟ್ಟುಗಳ ಹಾಡಿಗಳಿಗಿರುವ ಸಾಂಸ್ಕೃತಿಕ ಅಂಶಗಳ ಸಾಮ್ಯತೆ ಮತ್ತು ಭಿನ್ನತೆಯನ್ನು ಗುರುತಿಸುವ ಕೆಲಸವು ಸಂಶೋಧನಾ ವ್ಯಾಪ್ತಿಗೆ ಒಳಪಟ್ಟಿದೆ.

ಹಾಡಿಗಳಲ್ಲಿ ಮುಖ್ಯವಾಗಿ ಕಾಡಿನ ಅಂಚಿನಲ್ಲಿ ಮತ್ತು ಕಾಡಿನೊಳಗಿರುವ ಹಾಡಿಗಳಲ್ಲಿ ಬದುಕುತ್ತಿರುವ ಜನರ ಸಂಸ್ಕೃತಿಯಲ್ಲಿರುವ ವ್ಯತ್ಯಾಸಗಳನ್ನು ಮತ್ತು ಕಾರಣಗಳನ್ನು ಶೋಧಿಸುವುದು ಹಾಗೂ ಕಾಡಿನ ಬೇಟೆ ಸಂಸ್ಕೃತಿಯಿಂದ ನಾಡಿನ ಕೃಷಿ ಸಂಸ್ಕೃತಿಗೆ ಹಾಡಿಯ ಜನರು ಪಲ್ಲಟಗೊಂಡ ಸ್ಥಿತ್ಯಂತರದ ಇತಿಹಾಸದ ಹೆಜ್ಜೆಗಳನ್ನು ಗುರುತಿಸುವ ಉದ್ದೇಶವನ್ನು ಈ ನಿಯೋಜಿತ ಸಂಶೋಧನ ಮಹಾಪ್ರಬಂಧವು ಹೊಂದಿದೆ. ಹಾಡಿಗಳ ಸಾಂಸ್ಕೃತಿಕ ಅಧ್ಯಯನದ ಮೂಲಕ ಹಾಡಿಗಳಲ್ಲಿ ವಾಸಿಸುತ್ತಿರುವ ಜನರ ಮತ್ತು ಪ್ರಕೃತಿಯ ಅವಿನಾಭಾವ ಸಂಬಂಧ, ನೆಲ, ನೀರು, ಕಾಡು, ಬೇಟೆ, ಕೃಷಿ, ಕುಟುಂಬ, ಮದುವೆ, ಸಂತಾನ, ದುಡಿಮೆ, ಕಾಲ ಮೊದಲಾದವುಗಳ ಕುರಿತ ಗ್ರಹಿಕೆಗಳನ್ನು ವಿಶ್ಲೇಷಿಸಿ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

೨. ಪ್ರಸ್ತುತ ಅಧ್ಯಯನದ ಮಹತ್ವ

ಬೆಟ್ಟಕುರುಬರು, ಜೇನುಕುರುಬರನ್ನು ಕುರಿತು ಬಂದಿರುವ ಕೃತಿಗಳು ಮತ್ತು ಲೇಖನಗಳಲ್ಲಿರುವ ಆಕರಗಳನ್ನು ಬಳಸಿಕೊಂಡು ಈ ಬುಡಕಟ್ಟು ಸಮುದಾಯಗಳ ಶೈಕ್ಷಣಿಕ, ಆರ್ಥಿಕ ಮತ್ತು ಔದ್ಯೋಗಿಕ ಬದುಕನ್ನು ಗಂಭೀರವಾಗಿ ಅಧ್ಯಯನ ಮಾಡಲಾಗಿದೆ. ಕೊಡಗಿನ ಹಾಡಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಈವರೆಗೆ ಪ್ರಕಟವಾಗಿರುವ ಕೃತಿಗಳು ಮತ್ತು ಲೇಖನಗಳನ್ನು ಅವಲೋಕಿಸಿದಾಗ ಕೆಲವು ಅಂಶಗಳು ಸ್ಪಷ್ಟವಾಗುತ್ತದೆ. ಹಾಡಿಗಳಲ್ಲಿ ವಾಸಿಸುವ ಬುಡಕಟ್ಟುಗಳ ಅಧ್ಯಯನದಿಂದ ತಿಳಿದುಬರುವ ಸಂಗತಿಗಳು ಕೊಡಗು ಜಿಲ್ಲೆಯ ಬುಡಕಟ್ಟು ಸಮುದಾಯಗಳ ವಾಸಸ್ಥಳವಾದ 'ಹಾಡಿ'ಯ ಸ್ವರೂಪದ ಬಗೆಗೆ ಮಾಹಿತಿ ನೀಡುತ್ತವೆ. ಹಾಡಿಗಳಲ್ಲಿ ವಾಸಿಸುವ ಬುಡಕಟ್ಟುಗಳ ಜನರು ಹಾಡಿಗಳಲ್ಲಿ ವಾಸಮಾಡಲು ಕಟ್ಟಿಕೊಳ್ಳುವ ಗುಡಿಸಲುಗಳ ಬಗೆಗೆ ಸಾಕಷ್ಟು ವಿವರಗಳು ದೊರೆಯುತ್ತವೆ.

ಬೇರೆ ಬೇರೆ ಬುಡಕಟ್ಟು ಸಮುದಾಯಗಳು ವಾಸಿಸುವ 'ಹಾಡಿ'ಗಳ ರಾಚನಿಕ ಸ್ವರೂಪದ ಬಗೆಗೆ ಇರುವ ವ್ಯತ್ಯಾಸಗಳ ಕುರಿತಂತೆ ಲೇಖನಗಳು, ಕೃತಿಗಳಲ್ಲಿ ವಿವರಗಳು ದೊರೆಯುತ್ತವೆ. ಕೊಡಗಿನ 'ಹಾಡಿ'ಗಳಲ್ಲಿ ವಾಸಮಾಡುತ್ತಿರುವ ಮುಖ್ಯ ಬುಡಕಟ್ಟುಗಳಾದ ಕುಡಿಯರು, ಜೇನುಕುರುಬರು, ಎರವರು, ಮೇದರು ಮತ್ತು ಬೆಟ್ಟಕುರುಬರ ಕುರಿತಂತೆ ಅಧ್ಯಯನ ನಡೆದಿರುವುದು ಕಂಡುಬರುತ್ತದೆ. ಆದರೆ ಕೊಡಗಿನ ಹಾಡಿಗಳಲ್ಲಿನ ಜೇನುಕುರುಬ ಮತ್ತು ಬೆಟ್ಟಕುರುಬರ ಆಚರಣೆ ಮತ್ತು ಸಂಸ್ಕೃತಿಯ ಕುರಿತಂತೆ ವಿವರವಾದ ಅಧ್ಯಯನಗಳು ಹೆಚ್ಚಾಗಿ ನಡೆದಿಲ್ಲವೆಂದೇ ಹೇಳಬಹುದು. ಕೆಲವು ಬುಡಕಟ್ಟು ಸಮುದಾಯಗಳ ಭಾಷಿಕ ಅಧ್ಯಯನ, ಕುಲಕಸುಬುಗಳ ಅಧ್ಯಯನ ಹಾಗೂ ಜೀವನಾವರ್ತನ ಆಚರಣೆಗಳ ಅಧ್ಯಯನ – ಇವುಗಳ ಕಡೆಗೆ ಇವರೆಗಿನ ಅಧ್ಯಯನಕಾರರು ಒತ್ತು ಕೊಟ್ಟಿದ್ದರೂ, ಕೊಡಗಿನ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಕುರಿತಾಗಿ ಮಾಹಿತಿಗಳ ಸಂಗ್ರಹ ಹೆಚ್ಚಾಗಿ ನಡೆದಿದೆಯೇ ಹೊರತು ಅವುಗಳ ವಿಶ್ಲೇಷಣೆ ಅಷ್ಟಾಗಿ ನಡೆದಿಲ್ಲ. 'ಹಾಡಿ'ಗಳಲ್ಲಿ ವಾಸಿಸುವ ಬುಡಕಟ್ಟುಗಳ ಹೆಸರು ಮತ್ತು ಪ್ರಾಚೀನತೆಯ ಕುರಿತಂತೆ ಪುರಾಣ ರೂಪದ ಕಥೆಗಳಿದ್ದು ಇಂತಹ ಐತಿಹ್ಯಗಳ ಆಶಯಗಳನ್ನು ಗುರುತಿಸುವ ಕೆಲಸ ಅಷ್ಟಾಗಿ ನಡೆದಿಲ್ಲ. 'ಹಾಡಿ' ಸಂಸ್ಕೃತಿಯು ಒಳಗೊಳ್ಳುವ ಮೌಖಿಕ ಸಾಹಿತ್ಯ, ಭೌತಿಕ ಸಂಸ್ಕೃತಿ, ಸಾಮಾಜಿಕ ಆಚರಣೆಗಳು ಮತ್ತು ಪ್ರದರ್ಶನಾತ್ಮಕ ಕಲೆಗಳ ಬಗ್ಗೆ ಸಮಗ್ರವಾಗಿ ಅಧ್ಯಯನ ನಡೆಸಿರುವುದು ಈವರೆಗಿನ ಪ್ರಕಟಿತ ಸಾಹಿತ್ಯವನ್ನು ಅವಲೋಕಿಸಿದಾಗ ಹೆಚ್ಚಾಗಿ ಕಂಡುಬರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಹರಿಸಿ 'ಹಾಡಿ' ಸಂಸ್ಕೃತಿಯ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ತಿಳಿಯಲು ಹಲವು ಮೂಲಗಳಲ್ಲಿ ಲಭ್ಯವಾಗುವ ಆಕರ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. 'ಹಾಡಿ'ಗಳಲ್ಲಿ ವಾಸಿಸುವ ಜನರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಎಂಬುದನ್ನು ಮತ್ತು ಸಾಂಸ್ಕೃತಿಕವಾಗಿ ಮುಂದಿದ್ದಾರೆ ಎಂಬುದನ್ನು ಎಲ್ಲಾ ಬರಹಗಳು ಸಾರುತ್ತವೆ. ಇದಕ್ಕೆ ಕಾರಣ ಮತ್ತು ಅವಸ್ಥೆಯ ಸಾಧಕ, ಭಾದಕಗಳನ್ನು ಗುರುತಿಸುವ ಕಡೆಗೆ ಈವರೆಗಿನ ಅಧ್ಯಯನಕಾರರು ಗಮನಕೊಟ್ಟಿದ್ದು ಕಂಡುಬರುವುದಿಲ್ಲ. ಇಂತಹ ಮಹತ್ವದ ಅಂಶಗಳನ್ನು ಈ ಮಹಾಪ್ರಬಂಧದಲ್ಲಿ ಗುರುತಿಸಿ ದಾಖಲಿಸುವ ಪ್ರಯತ್ನ ಮಾಡಲಾಗಿದೆ.

ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನಲ್ಲಿ **೮೭** ಹಾಡಿಗಳಿವೆ. ಸೋಮವಾರಪೇಟೆ ತಾಲೂಕಿನಲ್ಲಿ **೫೩** ಹಾಡಿಗಳಿವೆ. ಮಡಿಕೇರಿ ತಾಲೂಕಿನಲ್ಲಿ **೧೪** ಹಾಡಿಗಳಿವೆ. ಈ 'ಹಾಡಿ'ಗಳಿಗೆ ವಿಶಿಷ್ಟವಾದ ಹೆಸರುಗಳಿವೆ. ಹಾಡಿಗಳ ಕುರಿತಂತೆ ಈವರೆಗೆ ಅಧ್ಯಯನ ಮಾಡಿರುವ ಸಂಶೋಧಕರು 'ಹಾಡಿ' ಎಂಬ ವಾಸಸ್ಥಳ ವಾಚಕ ಶಬ್ದವನ್ನು ಎಲ್ಲಾ ಕಡೆಗಳಲ್ಲಿ ಬಳಸುತ್ತಾ ಬಂದಿದ್ದಾರೆ. ವಾಸ್ತವಿಕವಾಗಿ

ಈ 'ಹಾಡಿ'ಗಳಿಗೆ ಇರುವ ಹೆಸರುಗಳ ಅನನ್ಯ ಕಾರಣಗಳನ್ನು ಶೋಧಿಸಲಾಗಿದೆ. 'ಹಾಡಿ'ಗಳಲ್ಲಿ ವಾಸಿಸುವ ಬುಡಕಟ್ಟುಗಳ ಬಗೆಗೆ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಲೇಖನಗಳನ್ನು ಅವಲೋಕಿಸಿದರೆ, ಈ ಲೇಖನಗಳಲ್ಲಿ ಬುಡಕಟ್ಟು ಜನರ ಬದುಕಿನ ಕಷ್ಟ, ನೋವು-ನಲಿವು, ಅವರು ಅನುಭವಿಸುವ ಮಳೆಗಾಲದ ಕಷ್ಟಗಳು, ಹಾಡಿಯ ಮಕ್ಕಳ ಶಾಲೆಯ ಸಮಸ್ಯೆಗಳು, ಹಾಡಿಗಳ ಮೂಲಭೂತ ಸಮಸ್ಯೆ ಹೀಗೆ ಹಾಡಿಗಳಲ್ಲಿರುವ ಜನರ ಬದುಕಿನ ಹತ್ತು ಹಲವು ಬವಣೆಗಳನ್ನು ತಿಳಿಯಬಹುದು. ಇಂತಹ ಲೇಖನಗಳಲ್ಲಿ ಪ್ರಕಟವಾದ ಬುಡಕಟ್ಟು ಸಮುದಾಯಗಳ ಕುರಿತ ಮಾಹಿತಿಗಳನ್ನು ಸಂಗ್ರಹಿಸಿ ಆ ಸಮುದಾಯಗಳ ಶೈಕ್ಷಣಿಕ, ಆರ್ಥಿಕ, ಮತ್ತು ಸಾಮಾಜಿಕ ಮತ್ತು ಔದ್ಯೋಗಿಕ ಸ್ಥಿತಿಗತಿಗೆ ಸಂಬಂಧಿಸಿದ ವಿವರಗಳನ್ನು ಪರಾಮರ್ಶಿಸಲಾಗಿದೆ.ಈ ಮಾಹಿತಿಗಳ ಆಧಾರದಲ್ಲಿ ಕೊಡಗಿನ ಹಾಡಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಹೊಸ ನೆಲೆಗಳನ್ನು ಕಲ್ಪಿಸುವ ಪ್ರಯತ್ನ ಮಾಡಲಾಗಿದೆ.

ಕೊಡಗು ಜಿಲ್ಲೆಯ 'ಹಾಡಿ'ಗಳಲ್ಲಿ ವಾಸಿಸುವ ಬುಡಕಟ್ಟು ಸಮುದಾಯಗಳಿಗೆ ಸಂಬಂಧಪಟ್ಟಂತೆ ಮಾಹಿತಿಗಳ ಸಂಗ್ರಹ ಕಾರ್ಯ ಹೆಚ್ಚಾಗಿ ನಡೆದಿದೆಯಾದರೂ ಅವುಗಳ ವಿಶ್ಲೇಷಣೆ ಅಷ್ಟಾಗಿ ನಡೆದಿಲ್ಲವಾದ್ದರಿಂದ ಈ ಅಧ್ಯಯನದಲ್ಲಿ ಈ ಅಂಶವನ್ನು ಅಳವಡಿಸಿಕೊಳ್ಳಲಾಗಿದೆ. ಬಹುತೇಕ ಎಲ್ಲಾ ಕೃತಿಗಳು ಮತ್ತು ಲೇಖನಗಳಲ್ಲಿ'ಹಾಡಿ' ಕುರಿತ ಹಾಗೆ ಸೀಮಿತವಾದ ಮಾಹಿತಿಗಳಿದ್ದು ಈ ಹಾಡಿಗಳ ಸಾಂಸ್ಕೃತಿಕ ಅಧ್ಯಯನದ ಸಂದರ್ಭದಲ್ಲಿ ಬುಡಕಟ್ಟು ಸಮುದಾಯಗಳ ಕುರಿತಂತೆ ಪ್ರಕಟವಾದ ಕೃತಿಗಳನ್ನು ಆಕರ ಗ್ರಂಥಗಳಾಗಿ ಬಳಸಿಕೊಳ್ಳಲಾಗಿದೆ.

ಇಂದು ನಮ್ಮ ದೇಶಿ ಸಂಸ್ಕೃತಿ, ನಮ್ಮ ಭಾಷೆ ಉಳಿಯಬೇಕೆಂಬ ಹೋರಾಟ ನಡೆಯುತ್ತಿರುವ ಸಂದರ್ಭದಲ್ಲಿ ಈ ರೀತಿಯ ಯಾವುದೇ ಹೋರಾಟವಿಲ್ಲದೆ ತನ್ನ ಮೂಲ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು ಬರುತ್ತಿರುವವರೆಂದರೆ ಹಾಡಿಗಳಲ್ಲಿರುವ ಬುಡಕಟ್ಟು ಸಮುದಾಯದವರು. ಅದರಲ್ಲಿ ಬಹುತೇಕ ಹಾಡಿಗಳಲ್ಲಿನ ಜನರು ಪುನರ್‌ವಸತಿ ಕೇಂದ್ರಗಳಿಗೆ ತೆರಳಿದ್ದಾರೆ.ಇದರಿಂದ ಇವರ ಬದುಕು ಸ್ಥಿತ್ಯಂತರಕ್ಕೆ ಒಳಗಾಗಿದೆ. ಸರಕಾರವು ಇವರಿಗೆ ಜೀವನ ನಿರ್ವಹಿಸಲು ಕೆಲವು ಸೌಲಭ್ಯಗಳು ನೀಡುತ್ತಿರುವುದರಿಂದ ಮತ್ತು ಸರಕಾರದಿಂದ ಲಭಿಸುವ ಶೈಕ್ಷಣಿಕ ಸೌಲಭ್ಯಗಳಿಂದ ಕೆಲವು ಹಾಡಿಗಳ ಜನರು ಶಿಕ್ಷಿತರಾಗುತ್ತಿದ್ದಾರೆ.ಇದರಿಂದ ಇವರ ಸಂಸ್ಕೃತಿ ಮಾರ್ಪಾಡಾಗುವ ಸಾಧ್ಯತೆಯಿದೆ. ಭವಿಷ್ಯದಲ್ಲಿ ಈ ಸಂಸ್ಕೃತಿ ಇಲ್ಲದೆಯೂ ಹೋಗಬಹುದು ಎಂಬ ಆತಂಕ ಕಾಡುತ್ತಿದೆ.ಆದುದರಿಂದ ಕೊಡಗಿನ ಹಾಡಿಗಳಲ್ಲಿ ಬದುಕುತ್ತಿರುವ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಶ್ರೀಮಂತವಾದ

ಮೂಲ ಸಂಸ್ಕೃತಿಯನ್ನು ದಾಖಲಿಸಿ ಮುಂದಿನ ಪೀಳಿಗೆಗೆ ಮತ್ತು ಅಧ್ಯಯನಕಾರರಿಗೆ ಉಳಿಸುವ ಮಹತ್ವದ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

೩. ಅಧ್ಯಯನದ ಸಮೀಕ್ಷೆ

ಕೊಡಗಿನ ಹಾಡಿಗಳಲ್ಲಿ ವಾಸಿಸುತ್ತಿರುವ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಜೀವನ ವಿಧಾನ, ಸಂಸ್ಕೃತಿಯ ಬಗೆಗಿನ ಕೃತಿಗಳು, ಲೇಖನಗಳು, ಪತ್ರಿಕಾ ವರದಿಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ. ಕರ್ನಾಟಕದ ಬುಡಕಟ್ಟುಗಳ ಕುರಿತ ಅಧ್ಯಯನಗಳನ್ನು ಅಭ್ಯಸಿಸಿ ಆಕರಗಳನ್ನಾಗಿ ಬಳಸಿಕೊಂಡು ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ನೀಡಲಾಗಿದೆ.

೪. ಅಧ್ಯಯನದ ವಿಧಾನ ಕ್ರಮ

'ಕೊಡಗು ಜಿಲ್ಲೆಯ ಹಾಡಿಗಳ ಸಾಂಸ್ಕೃತಿಕ ಅಧ್ಯಯನ' ಎಂಬ ವಿಷಯದ ಕುರಿತ ಸಂಶೋಧನೆಯ ಸಂದರ್ಭದಲ್ಲಿ ಕೊಡಗಿನ ಹಾಡಿಗಳು ಮತ್ತು ಹಾಡಿಗಳಲ್ಲಿ ವಾಸಿಸುತ್ತಿರುವ ಬುಡಕಟ್ಟು ಸಮುದಾಯಗಳ ಕುರಿತಂತೆ ಪ್ರಕಟವಾಗಿರುವ ಕೃತಿಗಳನ್ನು ಪ್ರಾಥಮಿಕ ಆಕರ ಸಾಮಾಗ್ರಿಗಳನ್ನಾಗಿ ಬಳಸಿಕೊಳ್ಳಲಾಗಿದೆ. ಕೊಡಗಿನ ಹಾಡಿಗಳಲ್ಲಿ ಬುಡಕಟ್ಟು ಜನರು ನಡೆಸುವ ದೈವಾರಾಧನೆಯ ಸಂದರ್ಭದಲ್ಲಿ ಹಾಡಲಾಗುವ ಹಾಡುಗಳು, ಕುಣಿತದ ಹಾಡುಗಳನ್ನೂ ಮತ್ತು ಹಾಡಿಯ ಜನರ ಜೀವನಾವರ್ತನ, ವಾರ್ಷಿಕಾವರ್ತನದ ಆಚರಣೆಗಳನ್ನು ಮುಖ್ಯವಾಗಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಸಂಶೋಧನಾತ್ಮಕ ಅಧ್ಯಯನಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಸ್ವತಃ ಕ್ಷೇತ್ರಕಾರ್ಯವನ್ನು ನಡೆಸಿ ಸಂಗ್ರಹಿಸಲಾಗಿದೆ.

ಕೊಡಗಿನ ಹಾಡಿಗಳ ಕುರಿತಂತೆ ಆಕರ ಸಾಮಗ್ರಿಗಳನ್ನು ಸಂಗ್ರಹಿಸುವಾಗ ಅವುಗಳ ಸಾಂದರ್ಭಿಕ ಮಾಹಿತಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗಿದ್ದು ಪ್ರಾದೇಶಿಕ ಪ್ರಾತಿನಿಧ್ಯ ಸಿಗುವಂತೆ ಕೊಡಗಿನ ಮೂರು ತಾಲೂಕಿನ ಹಾಡಿಗಳಲ್ಲಿಯು ಕ್ಷೇತ್ರಕಾರ್ಯ ನಡೆಸಲಾಗಿದೆ. ಕೊಡಗಿನ ಹಾಡಿಗಳ ಬುಡಕಟ್ಟುಗಳ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪಠ್ಯಗಳ ಬೃಹತ್ ಮಾಹಿತಿ ಶರೀರವನ್ನು ಆಧರಿಸಿ ವಿಶ್ಲೇಷಣೆ ನಡೆಸಲಾಗಿದೆ ಹಾಗೂ ಪ್ರಶ್ನಾವಳಿಗಳನ್ನು ಬಳಸುವುದರ ಜೊತೆಗೆ ಮುಕ್ತ ಸಂವಾದ ರೂಪದ ಸಂದರ್ಶನ ವಿಧಾನ ಬಳಸಿ ಮಾಹಿತಿಗಳನ್ನು ದಾಖಲಿಸಿಕೊಳ್ಳಲಾಗಿದ್ದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ವೈಜ್ಞಾನಿಕ ಸಲಕರಣೆಗಳನ್ನು ಬಳಸಿಕೊಳ್ಳಲಾಗಿದೆ.

ಹಾಡಿಗಳ ಸಾಂಸ್ಕೃತಿಕ ಅಧ್ಯಯನ ಮತ್ತು ಹಾಡಿಗಳ ಬುಡಕಟ್ಟು ಸಂಸ್ಕೃತಿಯ ಅಧ್ಯಯನಕ್ಕೆ ಸಂಬಂಧಪಟ್ಟಂತೆ ಸೋಮವಾರಪೇಟೆ, ವಿರಾಜಪೇಟೆ, ಮಡಿಕೇರಿ ತಾಲೂಕುಗಳಲ್ಲಿರುವ ಸಮಗ್ರ ಗಿರಿಜನ

ಅಭಿವೃದ್ದಿ ಯೋಜನಾ ಇಲಾಖೆಗಳಿಗೆ ಭೇಟಿ ನೀಡಿ ಮಾಹಿತಿಗಳನ್ನು ಸಂಗ್ರಹಿಸಿಲಾಗಿದೆ. ಅರಣ್ಯ ಇಲಾಖೆ ಮಡಿಕೇರಿ, ಗಿರಿಜನ ಸಹಕಾರ ಸಂಘ ಮಡಿಕೇರಿ, ಕನ್ನಡ ವಿಶ್ವವಿದ್ಯಾನಿಲಯ ಹಂಪಿಯ ಬುಡಕಟ್ಟು ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯ, ಮೈಸೂರು ವಿ.ವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಭಾಷಾಭಿವೃದ್ಧಿ ಅಧ್ಯಯನ ಕೇಂದ್ರ ಮೈಸೂರು, ಕೊಡಗು ಜಿಲ್ಲಾ ಪಂಚಾಯಿತಿ, ಮಡಿಕೇರಿ ಆಕಾಶವಾಣಿ, ಮಡಿಕೇರಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತು, ಮೊದಲಾದ ಕೇಂದ್ರಗಳಲ್ಲಿ ಲಭ್ಯವಿರುವ ಆಕರಗ್ರಂಥಗಳು ಮತ್ತು ಇತರ ಮಾಹಿತಿಗಳನ್ನು ಸೂಕ್ತವಾಗಿ ಬಳಸಿಕೊಳ್ಳಲಾಗಿದೆ. ಹಾಡಿಯ ಜನರ ಶೈಕ್ಷಣಿಕ ಸ್ಥಿತಿಗತಿಗೆ ಸಂಬಂಧಿಸಿದಂತೆ ಮೂರು ತಾಲೂಕುಗಳ ಪ್ರಮುಖ ಆಶ್ರಮಶಾಲೆ, ವಸತಿ ನಿಲಯಗಳನ್ನು ಆಧರಿಸಿ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಕೊಡಗಿನ ಹಾಡಿಗಳ ಮತ್ತು ಬುಡಕಟ್ಟುಗಳಿಗೆ ಸಂಬಂಧಪಟ್ಟಂತೆ ಪ್ರಕಟವಾಗಿರುವ ಸಾಂಸ್ಕೃತಿಕ ಪಠ್ಯಗಳನ್ನು ಆಕರ ಸಾಮಾಗ್ರಿಯನ್ನಾಗಿ ಬಳಸಿಕೊಂಡು, ಅಷ್ಟೇ ಅಲ್ಲದೇ ಬೇರೆಬೇರೆ ಮೂಲಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಕ್ರೋಢೀಕರಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಆರಾಧನೆಯ ಕಲಾವಿದರು ಹಾಡಿರುವ ಪಠ್ಯಗಳು, ಹಾಡಿಗಳಲ್ಲಿನ ಬುಡಕಟ್ಟು ಸಮುದಾಯಗಳಲ್ಲಿರುವ ಕುಣಿತಗಳು, ಹಾಡಿಯೊಳಗಿನ ನಿಯಮ, ನಿರ್ಬಂಧ, ಆಚರಣೆಗಳು, ನಂಬಿಕೆ, ವ್ಯವಸಾಯ, ಹಾಡಿಯ ಜನರಿಗಿರುವ ಪ್ರಾಣಿ ಮತ್ತು ಪ್ರಕೃತಿ ಸಂಬಂಧ, ಕಥೆ, ಐತಿಹ್ಯಗಳನ್ನು ಮುಂತಾದವುಗಳನ್ನು ಸಮಗ್ರವಾಗಿ ಅಧ್ಯಯನ ನಡೆಸಲಾಗಿದೆ.

ಕೊಡಗು ಜಿಲ್ಲೆಯ ಹಾಡಿಗಳಲ್ಲಿ ಜೇನುಕುರುಬ ಮತ್ತು ಬುಡಕಟ್ಟು ಸಮುದಾಯಗಳ ಕುರಿತಾದ ವ್ಯಕ್ತಿ ಸಂದರ್ಶನ ಮತ್ತು ಆಚರಣೆಗಳಲ್ಲಿನ ಕ್ಷೇತ್ರಕಾರ್ಯದ ಸಂದರ್ಭಗಳಲ್ಲಿ ವೈಜ್ಞಾನಿಕ ವಿಧಾನಗಳಿಂದ ವಿಷಯಗಳನ್ನು ಸಂಗ್ರಹಿಸಿದ್ದೇನೆ. ಸಮುದಾಯಗಳ ಸಾಹಿತ್ಯ, ಕಲೆ, ಜಾನಪದ, ಸಂಸ್ಕೃತಿ ಮತ್ತು ಜೀವನ ವಿಧಾನವನ್ನು ತಿಳಿದುಕೊಳ್ಳುವ ಸಲುವಾಗಿ ಹಾಡಿಗಳಿಗೆ ತೆರಳಿ ಬಲ್ಲವರಿಂದ ಮಾಹಿತಿ ಸಂಗ್ರಹಿಸಲಾಗಿದೆ. ಹಾಡಿಗಳಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಆಚರಣೆಗಳನ್ನು ಸ್ವತಃ ವೀಕ್ಷಣೆ ಮಾಡುವ ಮೂಲಕ ಸಂಪೂರ್ಣ ಮತ್ತು ಸಮರ್ಪಕವಾದ ವೈಜ್ಞಾನಿಕ ಕ್ಷೇತ್ರಕಾರ್ಯವನ್ನು ಮಾಡಿ ವಿಷಯಗಳನ್ನು ಸಂಗ್ರಹಿಸಲಾಗಿದೆ.

ಆಚರಣೆಗಳು ನಡೆಯುವ ಸಂದರ್ಭದಲ್ಲಿ ಸಮಗ್ರ ವಿವರಗಳನ್ನು ದಾಖಲಿಸುವ ಸಲುವಾಗಿ ಪ್ರಶ್ನಾವಳಿಗಳನ್ನು ಬಳಸಿ ವಕ್ತೃಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಸಂದರ್ಶನದಲ್ಲಿ ಮೌಖಿಕವಾಗಿ, ಸಂಭಾಷಣೆ, ಆಚರಣೆ, ನಂಬಿಕೆ, ಹಾಡು, ಕಥೆ, ಸಂಪ್ರದಾಯಗಳ ಸಂದರ್ಭದಲ್ಲಿ ಪ್ರಶ್ನಾವಳಿಗಳನ್ನು

ಬಳಸಿದ್ದೇನೆ. ಪ್ರಶ್ನಾವಳಿಯ ಪಟ್ಟಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಆಚರಣೆ ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಕೆಲವು ವಿದ್ವಾಂಸರನ್ನು ಸಂದರ್ಶಿಸಿ ಮಾಹಿತಿಗಳನ್ನು ಸಂಗ್ರಹಿಸಿದ್ದೇನೆ ಮತ್ತು ಬರವಣಿಗೆಯ ಸಂದರ್ಭದಲ್ಲಿ ಅನ್ವಯಗೊಳಿಸಿದ್ದೇನೆ.

ಅಧ್ಯಾಯ ೧: ಕೊಡಗಿನ ಹಾಡಿಗಳು – ಸಾಂಸ್ಕೃತಿಕ ಸ್ವರೂಪ

ಮೊದಲನೇ ಅಧ್ಯಾಯದಲ್ಲಿ ಕೊಡಗಿನ ಭೌಗೋಳಿಕ ವಿಸ್ತೀರ್ಣ, ಜನಸಂಖ್ಯೆ ಮತ್ತು ಕೆಲವು ಬುಡಕಟ್ಟು ಸಮುದಾಯಗಳು ವಾಸಿಸುತ್ತಿರುವ ದೇವರಕಾಡಿನ ಕುರಿತಾಗಿ ವಿವರಿಸಲಾಗಿದೆ. 'ಹಾಡಿ' ಪದದ ನಿಷ್ಪತ್ತಿ, ಅರ್ಥಕ್ಕೆ ಸಂಬಂಧಿಸಿದಂತೆ ಭಾಷಾ ವಿದ್ವಾಂಸರ ಕೃತಿಗಳು, ವಿವಿಧ ನಿಘಂಟು ಮತ್ತು ಕೋಶಗಳನ್ನು ಅಭ್ಯಸಿಸಿ ಅರ್ಥವನ್ನು ಕಂಡುಕೊಳ್ಳುವ ಪ್ರಯತ್ನ ನಡೆಸಿ ಹಟ್ಟಿಯು 'ಕಾಲಾಂತರ'ದಲ್ಲಿ 'ಹಾಡಿ'ಯಾಯಿತೆಂದು ಕಂಡುಕೊಳ್ಳಲಾಗಿದೆ. ಹಾಡಿಯ ರಚನೆಯ ಸ್ವರೂಪವನ್ನು ವಿವೇಚಿಸುವ ಸಂದರ್ಭದಲ್ಲಿ ಕೊಡಗಿನ ಹಾಡಿಗಳು ಮೊದಲಿನಂತೆ ತಮ್ಮ ಮೂಲಸ್ವರೂಪವನ್ನು ಉಳಿಸಿಕೊಂಡಿಲ್ಲವೆಂದೇ ಹೇಳಬಹುದು. ಆರಂಭದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಿವಿಧ ಕಾರಣಗಳಿಗಾಗಿ ಪ್ರಯಾಣ ಬೆಳೆಸುತ್ತಿದ್ದ ಸಂದರ್ಭದಲ್ಲಿ ಅನುಕೂಲಕರವಾದ ಪರಿಸರದಲ್ಲಿ ವ್ಯವಸಾಯ ಮಾಡಲು ಮತ್ತು ವಾಸಿಸಲು ಅನಿವಾರ್ಯವಾಗಿ ಹಾಡಿಗಳನ್ನು ನಿರ್ಮಿಸಿಕೊಳ್ಳುತಿದ್ದರು. ಹಾಡಿಗಳನ್ನು ನಿರ್ಮಿಸಲು ಕೆಲವು ನಿಯಮಗಳನ್ನು ಪಾಲಿಸುತ್ತಿದ್ದ ಕೆಲವು ಬುಡಕಟ್ಟುಗಳು ಕಾಲಕ್ರಮೇಣ ಸ್ಥಿರ ಬೇಸಾಯ ಪದ್ಧತಿಯನ್ನು ರೂಢಿಸಿಕೊಂಡು ಅಲೆಮಾರಿ ಪ್ರವೃತ್ತಿಯನ್ನು ಬಿಟ್ಟುಬಿಟ್ಟರು. ಹಾಡಿಗಳಲ್ಲಿ ಒಂದೇ ಸಮುದಾಯಕ್ಕೆ ಸೇರಿದ ಕುಟುಂಬಗಳು ಅರ್ಧಚಂದ್ರಾಕೃತಿಯಲ್ಲಿ ಗುಡಿಸಲುಗಳನ್ನು ಕಟ್ಟಿಕೊಳ್ಳುತ್ತಿದ್ದರು ಮತ್ತು ಸುತ್ತಲು ಹತ್ತರಿಂದ ಹದಿನೈದು ಗುಡಿಸಲುಗಳಿರುತ್ತಿದ್ದವು. ಇಂದು ಕೆಲವು ಹಾಡಿಗಳಲ್ಲಿ ಗುಡಿಸಲುಗಳು ಹೇರಳವಾಗಿದ್ದು ಹೆಂಚಿನ ಮನೆಗಳು ವಿರಳವಾಗಿ ಕಂಡುಬರುತ್ತಿವೆ. ಇನ್ನೂ ಕೆಲವು ಹಾಡಿಗಳಲ್ಲಿ ಸರಕಾರದ ವತಿಯಿಂದ ಹೊಸದಾಗಿ ನಿರ್ಮಿಸಲ್ಪಟ್ಟ ಹೆಂಚಿನ ಮನೆಗಳನ್ನು ಕಾಣಬಹುದಾಗಿದೆ.

ಕೊಡಗು ಜಿಲ್ಲೆಯಲ್ಲಿನ ಸೋಮವಾರಪೇಟೆ, ವಿರಾಜಪೇಟೆ ಮತ್ತು ಮಡಿಕೇರಿ ತಾಲೂಕಿನ ದಟ್ಟ ಅರಣ್ಯಗಳಲ್ಲಿ ಮತ್ತು ಅರಣ್ಯದಂಚಿನ ಹಾಡಿಗಳನ್ನು ಗುರುತಿಸಿ ಕ್ಷೇತ್ರಕಾರ್ಯ ನಡೆಸಿ ಒಟ್ಟು ಹಾಡಿಗಳ ಹೆಸರುಗಳ ಪಟ್ಟಿ ತಯಾರಿಸಲಾಗಿದೆ. ಹಾಡಿಗಳ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಹಾಡಿಗಳಿಗಿರುವ ವಿಶಿಷ್ಟ ಹೆಸರುಗಳ ಹಿನ್ನಲೆ, ಕಾರಣ ಮತ್ತು ವೈಶಿಷ್ಟ್ಯವನ್ನು ಗುರುತಿಸುವ ಕೆಲಸ ಮಾಡಲಾಗಿದೆ. ಹಾಡಿಗಳ ಹೆಸರುಗಳ ಮೂಲಕ ಪ್ರಕಟವಾಗುವ ಸಾಂಸ್ಕೃತಿಕ ಇತಿಹಾಸವನ್ನು ಸ್ಥಳನಾಮ ಅಧ್ಯಯನದ ಮೂಲಕ

ತಿಳಿಸುವ ಪ್ರಯತ್ನ ನಡೆಸಲಾಗಿದೆ. ಕೊಡಗಿನ ಬಹುತೇಕ ಹಾಡಿಗಳು ಭೌಗೋಳಿಕ ಪರಿಸರದ ಪ್ರಭಾವದಿಂದ ಹುಟ್ಟಿಕೊಂಡ ಹೆಸರುಗಳಾಗಿವೆ. ಹೀಗೆ ಹಾಡಿಯ ಹೆಸರುಗಳ ಪಟ್ಟಿ, ಹಿನ್ನಲೆ, ಕಾರಣ ಮತ್ತು ವೈಶಿಷ್ಟ್ಯವನ್ನು ಈ ಅಧ್ಯಾಯದಲ್ಲಿ ಕಂಡುಕೊಳ್ಳಲಾಗಿದೆ.

ಕೊಡಗಿನ ಹಾಡಿಗಳಿಗೆ ಭೇಟಿ ನೀಡಿ ಕ್ಷೇತ್ರಕಾರ್ಯದ ಮೂಲಕ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.ಅದಕ್ಕನುಗುಣವಾಗಿ ಕೊಡಗಿನಲ್ಲಿರುವ ಹಾಡಿಗಳನ್ನು ಮಡಿಕೇರಿ, ವಿರಾಜಪೇಟೆ ಹಾಗೂ ಸೋಮವಾರಪೇಟೆ ತಾಲೂಕಿನಲ್ಲಿರುವ ಹಾಡಿಗಳನ್ನು ವರ್ಗೀಕರಿಸಿ ಅವುಗಳ ಸಾಂಸ್ಕೃತಿಕ ಸ್ವರೂಪದ ವಿವೇಚನೆಯ ತಾತ್ವಿಕ ಚರ್ಚೆಯನ್ನು ನಡೆಸಲಾಗಿದ್ದು ಜೊತೆಗೆ ಆ ಹಾಡಿಗಳ ಮಹತ್ವವನ್ನು ತಿಳಿಸಲಾಗಿದೆ.ಈ ಮೂರು ತಾಲೂಕುಗಳ ಹಾಡಿಗಳು ಶತಮಾನಗಳಿಂದ ಕಾಡಿನ ಮಧ್ಯೆ ಮತ್ತು ಕಾಡಂಚಿನಲ್ಲಿ ಬದುಕು ಸಾಗಿಸುತ್ತಿರುವುದರ ಹಿಂದಿನ ಸಾಂಸ್ಕೃತಿಕ ಅನನ್ಯತೆಯನ್ನು ಗುರುತಿಸುವ ಕೆಲಸ ನಡೆಸಿ ಹಾಡಿಗಳ ಸಾಂಸ್ಕೃತಿಕ ಸ್ವರೂಪವನ್ನು ತೌಲನಿಕವಾಗಿ ವಿವೇಚಿಸಲಾಗಿದೆ.

ಅಧ್ಯಾಯ ೨: ಹಾಡಿಗಳ ಬುಡಕಟ್ಟುಗಳು – ಸಾಂಸ್ಕೃತಿಕ ಹಿನ್ನೆಲೆ

ಕೊಡಗಿನ ಬುಡಕಟ್ಟುಗಳ ಪ್ರವೇಶಿಕೆಯ ಸಂದರ್ಭ ಬುಡಕಟ್ಟು ಪದದ ಅರ್ಥ, ವ್ಯಾಪ್ತಿ ಮತ್ತು ಸ್ವರೂಪ ಹಾಗೂ ಬುಡಕಟ್ಟು ಸಂಸ್ಕೃತಿ, ಆ ಸಮುದಾಯದ ಲಕ್ಷಣಗಳ ಕುರಿತಾಗಿ ಸ್ಥೂಲ ಪರಿಚಯವನ್ನು ಮಾಡಿಕೊಳ್ಳಲಾಗಿದೆ. ಕೊಡಗಿನ ಅರಣ್ಯಗಳಲ್ಲಿ ಹಾಡಿಗಳನ್ನು ನಿರ್ಮಿಸಿಕೊಂಡು ಬದುಕುತ್ತಿರುವ ಕುಡಿಯ–ಮಲೆಕುಡಿಯ, ಎರವ, ಮೇದ, ಮುಂತಾದ ಸಮುದಾಯಗಳ ಕುಲಕಸುಬು, ಇತಿಹಾಸ, ಆಚರಣೆ ಕುರಿತಂತೆ ವಿವರಣೆ ನೀಡಲಾಗಿದೆ. ಪ್ರಮುಖವಾಗಿ ಈ ಮಹಾಪ್ರಬಂಧದಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಹುಟ್ಟಿನಿಂದ ಸಾವಿನವರೆಗಿನ ನಂಬಿಕೆ, ಆಚರಣೆ, ಸಂಪ್ರದಾಯ, ಕಟ್ಟು ಕಟ್ಟಳೆಗಳು ಮುಂತಾದವನ್ನು ಸಾಂಸ್ಕೃತಿಕ ಅಧ್ಯಯನದ ಚೌಕಟ್ಟಿನಲ್ಲಿ ಅಧ್ಯಯನ ನಡೆಸಲಾಗಿದೆ. ಈ ಎರಡು ಸಮುದಾಯಗಳನ್ನೇ ಕೇಂದ್ರವಾಗಿರಿಸಿಕೊಂಡು ಇವರ ಸಾಂಸ್ಕೃತಿಕ ಹಿನ್ನಲೆ ಹಾಗೂ ಈ ಜನರ ಸಾಂಪ್ರದಾಯಿಕ ಕುಲಕಸುಬುಗಳು ಕುರಿತಂತೆ ಅಧ್ಯಯನ ನಡೆಸಲಾಗಿದೆ.

ಈ ಬುಡಕಟ್ಟು ಸಮುದಾಯಗಳು ತಮ್ಮ ಕುಲಕಸುಬುಗಳ ಮೂಲಕ ಕಟ್ಟಿಕೊಡುವ ದೇಶಿಯ ಜ್ಞಾನಪರಂಪರೆಯನ್ನು ಹಾಗೂ ಜೇನುಕುರುಬರ ಮತ್ತು ಬೆಟ್ಟಕುರುಬರ ಹಾಡಿಗಳಲ್ಲಿ ನಡೆಸುವ ಬೇರೆ ಬೇರೆ ಆರಾಧನೆಗಳಿಗೆ ಸಂಬಂಧಿಸಿದ ಪುರಾಣ ಕಥಾನಕಗಳನ್ನು ವಿಶ್ಲೇಷಿಸಿ ಸಾಂಸ್ಕೃತಿಕ ಚರಿತ್ರೆಯ ನೆಲೆಗಳನ್ನು ಗುರುತಿಸುವ ಪ್ರಯತ್ನ ನಡೆಸಲಾಗಿದೆ.

ಅಧ್ಯಾಯ ೩: ಹಾಡಿ ಮತ್ತು ಜಾನಪದ: ಸಂಸ್ಕೃತಿಯ ಅನಾವರಣ

ಮೂರನೇ ಅಧ್ಯಾಯದಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳನ್ನು ನಿರಂತರ ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ, ಆಚರಣೆಗಳನ್ನು ವೈಜ್ಞಾನಿಕ ಉಪಕರಣಗಳ ಸಹಾಯದಿಂದ ಮಾಹಿತಿ ಸಂಗ್ರಹಿಸಿ ವಿಶ್ಲೇಷಣೆ ನಡೆಸಿರುತ್ತೇನೆ. ಇವರ ಸಂಪ್ರದಾಯ, ಆಚರಣೆಗಳು, ಭೌತಿಕ ಸಂಸ್ಕೃತಿ, ಮೌಖಿಕ ಸಾಹಿತ್ಯ, ಪ್ರದರ್ಶನ ಕಲೆಗಳು ಮುಂತಾದ ಜಾನಪದ ಅಂಶಗಳನ್ನು, ಹಾಡಿಯಿಂದ ಹಾಡಿಗಳಿಗಿರುವ ಭಿನ್ನ ಸ್ವರೂಪವನ್ನು ಗುರುತಿಸುವ ಪ್ರಯತ್ನ ನಡೆಸಲಾಗಿದೆ.

ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಐತಿಹ್ಯ ಕಥೆಗಳು, ಸಾಂಪ್ರದಾಯಿಕ ಆಹಾರ ಪದ್ಧತಿ, ಜೀವನಾವರ್ತನ ಆಚರಣೆಗಳು ಮತ್ತು ವಾರ್ಷಿಕಾವರ್ತನ ಆಚರಣೆಗಳನ್ನು ಈ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಸಮುದಾಯಗಳು ಆಚರಿಸುವ ಹಬ್ಬಗಳು ಮತ್ತು ಅವುಗಳಿಗಿರುವ ಜಾನಪದ/ಐತಿಹ್ಯ ಕಥೆಗಳನ್ನು ವಕ್ತೃಗಳಿಂದ ದಾಖಲಿಸಿ ವಿಶ್ಲೇಷಿಸಲಾಗಿದೆ. ಬುಡಕಟ್ಟು ಸಮುದಾಯಗಳು ಮರದ ತೊಗಟೆ, ಗಿಡಗಳ ಎಲೆಗಳಿಂದ ಮೈಮುಚ್ಚಿಕೊಳ್ಳುತ್ತಿದ್ದ ಹಿಂದಿನ ದಿನಗಳು ಇಂದು ಬದಲಾಗಿವೆ. ನವನಾಗರೀಕತೆಯ ಉಡುಪುಗಳಿಗೆ ಹೊಂದಿಕೊಂಡ ಇವರು ಗಡಿಯಾರ, ರೇಡಿಯೋ, ಟಿವಿ, ಮೊಬೈಲ್, ವಾಹನ ಮುಂತಾದ ಆಧುನಿಕ ಉಪಕರಣಗಳಿಗೆ ಹಾಡಿಯ ಜನ ಆಕರ್ಷಿತರಾಗುತ್ತಿದ್ದಾರೆ. ಹಿಂದೆ ಹಾಡಿಯ ಮಧ್ಯಭಾಗದಲ್ಲಿ ಸದಾ ಬೆಂಕಿ ಹೊತ್ತಿಸಿ ಅದರ ಸುತ್ತ ಕುಳಿತು ಗಾದೆ, ಕಥೆ, ಒಗಟು, ಹಾಡು, ನೃತ್ಯ ಮುಂತಾದವುಗಳನ್ನು ಪರಸ್ಪರ ಹಂಚಿಕೊಳುತ್ತಿದ್ದರು.ಇಂದು ಇಂತಹ ಪ್ರಕ್ರಿಯೆ ಬಹುತೇಕ ಹಾಡಿಗಳಲ್ಲಿ ಇಲ್ಲವಾಗಿದ್ದು 'ದಸರಾ', 'ಕಾಡಿನ ಮಕ್ಕಳ ರೇಡಿಯೋ ಹಬ್ಬ' ಮುಂತಾದ ಕಾರ್ಯಕ್ರಮಗಳಿಗೆ ಇವರ ಮನರಂಜನಾತ್ಮಕ ಕಲೆಗಳು ಸೀಮಿತವಾಗಿವೆ. ಈ ಎಲ್ಲಾ ಅಂಶಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ೪: ಹಾಡಿ ಮತ್ತು ಆಧುನಿಕ ಸಂದರ್ಭ

ಕೊಡಗಿನಲ್ಲಿರುವ 'ಜೇನುಕುರುಬ' ಮತ್ತು 'ಬೆಟ್ಟಕುರುಬ' ಹಾಡಿಗಳು ಗ್ರಾಮ ಮತ್ತು ಹಳ್ಳಿಗಳಿಂದ ದೂರ ಉಳಿದಿವೆ. ಆಧುನಿಕ ಸಂದರ್ಭದ ಹಾಡಿಯ ಜನರು ನಗರಗಳ ಸಂಪರ್ಕದಿಂದ ಸಾಮಾಜಿಕವಾಗಿ ತಮ್ಮ ದಿನನಿತ್ಯದ ಜೀವನಶೈಲಿಯನ್ನು ಬದಲಿಸಿಕೊಂಡಿದ್ದಾರೆ. ಅರಣ್ಯಗಳಲ್ಲಿ ಸ್ವಚ್ಛಂದವಾಗಿ ಬದುಕುತ್ತಿದ್ದ ಜೇನುಕುರುಬರು ಮತ್ತು ಬೆಟ್ಟಕುರುಬರು ಹಿಂದೆ ಹಾಡಿಯ ಯಜಮಾನನ ನ್ಯಾಯ ತೀರ್ಮಾನಗಳಿಗೆ ತಲೆಬಾಗುತ್ತಿದ್ದರು. ಆದರೆ ಇಂದು ನಗರಗಳ ಸಂಪರ್ಕ ಪಡೆದುಕೊಂಡ ನಂತರದಲ್ಲಿ ಬಹುತೇಕ

ಹಾಡಿಗಳಲ್ಲಿ ನಡೆಯುವ ಕೌಟುಂಬಿಕ ಕಲಹ, ಜಗಳಗಳಿಗೆ ಪೋಲಿಸ್ ಸ್ಟೇಷನ್‌ಗೆ ದೂರು ನೀಡಿ ನ್ಯಾಯಕ್ಕಾಗಿ ಮೊರೆಹೋಗುತ್ತಿರುವ ಹಾಡಿಯ ಜನರ ಬದಲಾದ ಮನಸ್ಥಿತಿಯ ಧೋರಣೆ ಗೋಚರವಾಗುತ್ತದೆ.

ಬಹುಪಾಲು ಹಾಡಿಗಳಲ್ಲಿ ಕಾಡಿನಲ್ಲಿ ಸಿಗುವ ಗಿಡಮೂಲಿಕೆಗಳಿಂದ ವಿವಿಧ ರೀತಿಯ ಖಾಯಿಲೆಗಳನ್ನು ವಾಸಿಮಾಡಿಕೊಳ್ಳುತ್ತಿದ್ದವರು ತಮ್ಮ ಮುಂದಿನ ಪೀಳಿಗೆಗೆ ವೈದ್ಯ ಪದ್ಧತಿಯನ್ನು ಕಲಿಸಲು ಮರೆತರೋ ಅಥವಾ ಹೊಸತನಕ್ಕೆ ಮಾರು ಹೋದ ಸಮುದಾಯ ಕಲಿಯಲು ಅಸಡ್ಡೆ ತೋರಿದರೋ.. ಒಟ್ಟಿನಲ್ಲಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುವುದನ್ನು ರೂಢಿಸಿಕೊಂಡಿದ್ದಾರೆ. ಈ ಪ್ರಕ್ರಿಯೆ ಎಲ್ಲಾ ಹಾಡಿಗಳಲ್ಲಿದೆ ಎಂದು ಹೇಳಲಾಗದು. ತಮ್ಮ ಪೂರ್ವಿಕರು ಅನುಸರಿಸಿದ ಶಾಸ್ತ್ರ, ಸಂಪ್ರದಾಯ, ನಂಬಿಕೆ, ಕಲೆ, ಆಚರಣೆ ಮುಂತಾದವುಗಳನ್ನು ನಿಷ್ಠೆಯಿಂದ ಮುಂದುವರಿಸಿಕೊಂಡು ಬರುತ್ತಿರುವ ಹಾಡಿಗಳೂ ಇವೆ. ಈ ಎಲ್ಲಾ ಅಂಶಗಳನ್ನು ಒಳಗೊಂಡಂತೆ ಸಾಮಾಜಿಕ ಸ್ಥಿತಿಗತಿಯ ಭಾಗದಲ್ಲಿ ಅಧ್ಯಯನ ನಡೆಸಲಾಗಿದೆ.

ಹಾಡಿಯ ಜನರ ಆರ್ಥಿಕ ಸ್ಥಿತಿಗತಿಯ ಅಧ್ಯಯನ ಕೈಗೊಂಡ ಸಂದರ್ಭ ಹಲವು ಅಂಶಗಳನ್ನು ಗುರುತಿಸಲಾಗಿದೆ. ಹಣ ಮತ್ತು ಆಸ್ತಿಯನ್ನು ಕ್ರೋಢೀಕರಿಸಿ ಮುಂದಿನ ದಿನಗಳಿಗೆ ಉಳಿಸಬೇಕೆಂಬ ಯಾವ ಆಸೆಯೂ ಇವರಲ್ಲಿಲ್ಲ. ಪ್ರಸ್ತುತ ದಿನಗಳಲ್ಲಿ ಜಾಗತೀಕರಣದ ಪ್ರಭಾವ ಮತ್ತು ಸರಕಾರದ ಅರಣ್ಯ ಕಾಯ್ದೆಗಳಿಂದ ತಮ್ಮ ಹಕ್ಕನ್ನು ಪಡೆದುಕೊಳ್ಳಲು ಹೆಣಗಾಡುತ್ತಿರುವ ಇವರು ತಾವು ಕಟ್ಟಿಕೊಂಡ ಗುಡಿಸಲಿನ ಸುತ್ತ ಕೃಷಿ ಮಾಡಿರುವ ನೆಲವನ್ನು ಹಕ್ಕುಪತ್ರ ಪಡೆಯುವ ಮೂಲಕ ತಮ್ಮದಾಗಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಈ ಬದಲಾದ ಪ್ರಕ್ರಿಯೆಗಳಿಂದ ಹಾಡಿಗಳ ಗುಡಿಸಲುಗಳು ಒಂದಕ್ಕಿಂತ ಒಂದು ದೂರದಲ್ಲಿರುವುದನ್ನು ಗಮನಿಸಬಹುದು.

ಶೈಕ್ಷಣಿಕವಾಗಿ ಹಿಂದುಳಿಯುತ್ತಿರುವ ಈ ಬುಡಕಟ್ಟುಗಳು ಇತರ ಸಮುದಾಯಗಳೊಂದಿಗೆ ಸಮಾನವಾಗಿ ಬದುಕಲು ಸಾಧ್ಯವಾಗುತ್ತಿಲ್ಲ. ಹಾಡಿಗಳ ಪಕ್ಕದಲ್ಲೇ ಆಶ್ರಮ ಶಾಲೆಗಳಿದ್ದರೂ ಅನುಕೂಲಕರ ವಾತಾವರಣವಿಲ್ಲದಿರುವುದು ಅನಕ್ಷರತೆಗೆ ಮತ್ತೊಂದು ಕಾರಣ.ಮತ್ತೊಂದೆಡೆ ಪೋಷಕರೇ ಮಕ್ಕಳ ಶಿಕ್ಷಣದ ಬಗೆಗೆ ಮುತುವರ್ಜಿ ವಹಿಸದಿರುವುದೂ ಕಂಡುಬರುತ್ತದೆ. ಇವರಿಗೆ ಶಿಕ್ಷಣದ ಮಹತ್ವ ಮತ್ತು ಉದ್ಯೋಗವನ್ನು ಪರಿಣಾಮಕಾರಿಯಾಗಿ ಕಲ್ಪಿಸುವ ಪ್ರಯತ್ನ ಸರಕಾರ ಮತ್ತು ಸಂಘ ಸಂಸ್ಥೆಗಳು ಇನ್ನಷ್ಟು ಮುತುವರ್ಜಿ ವಹಿಸಿದರೆ ಹಾಡಿಯ ಜನರು ಇತರ ಸಮುದಾಯದವರೊಂದಿಗೆ ಸಮಾನತೆಯಿಂದ ಬದುಕಬಹುದು.

ಹಾಡಿಗಳ ಸಾಂಸ್ಕೃತಿಕ ಪಲ್ಲಟದ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ನಡೆಸಲಾಗಿದೆ. ಜೇನುಕುರುಬರು ಮತ್ತು ಬೆಟ್ಟಕುರುಬರು ಅನ್ಯಸಂಸ್ಕೃತಿಯ ಪ್ರಭಾವ, ಆಧುನೀಕತೆಯ ಪ್ರವೇಶಿಕೆಯಿಂದ ತಮ್ಮ ಜೀವನ ಕ್ರಮ, ಆಚಾರ, ಸಂಪ್ರದಾಯ ಮತ್ತು ಕುಲಕಸುಬುಗಳಲ್ಲಿ ಹಲವು ಮಾರ್ಪಾಡುಗಳನ್ನು ಮಾಡಿಕೊಂಡಿದ್ದಾರೆ. ಕೃಷಿ, ವಿಧಿ ನಿಷೇಧ, ಮನೆಗಳ ನಿರ್ಮಾಣ, ಕೌಟುಂಬಿಕ ವ್ಯವಸ್ಥೆ, ಉಡುಪು, ವೈಧ್ಯ ಪದ್ಧತಿ/ ಆರೋಗ್ಯ, ಆಹಾರ, ಭಾಷೆ, ಆಚರಣೆ ಮತ್ತು ಸಂಪ್ರದಾಯ, ನ್ಯಾಯಪದ್ಧತಿ, ಉದ್ಯೋಗ ಮುಂತಾದವುಗಳು ಕೊಡಗಿನ ಬುಡಕಟ್ಟು ಸಮುದಾಯಗಳ ಸಾಂಸ್ಕೃತಿಕ ಪಲ್ಲಟಕ್ಕೆ ಒಳಗಾದವು ಎಂಬುದನ್ನು ವಿವರಿಸಲಾಗಿದೆ. ಹಾಡಿಗಳಲ್ಲಿ ಜೇನುಕುರುಬರು ಮತ್ತು ಬೆಟ್ಟಕುರುಬರು ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಸ್ಥಾನಮಾನವನ್ನು ಸಮಗ್ರ ಅಧ್ಯಯನ ನಡೆಸಿ ಈ ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ೫: ಉಪಸಂಹಾರ/ಅಧ್ಯಯನದ ಫಲಿತಗಳು

ಈ ಭಾಗದಲ್ಲಿ ಜೇನುಕುರುಬ ಮತ್ತು ಬೆಟ್ಟಕುರುಬ ಸಮುದಾಯಗಳ ಹಾಡಿಯ ಸಾಂಸ್ಕೃತಿಕ ಅಧ್ಯಯನದ ಒಟ್ಟು ಫಲಿತಗಳನ್ನು ತಿಳಿಸಲಾಗಿದೆ. ಆಕರಗಳಿಂದ ಮತ್ತು ಕ್ಷೇತ್ರಕಾರ್ಯದಿಂದ ಕಂಡುಕೊಂಡ ಫಲಿತಾಂಶ ಮತ್ತು ಅಧ್ಯಯನದ ಸಾಧ್ಯತೆಗಳನ್ನು ನೀಡಲಾಗಿದೆ.

ಅನುಬಂಧಗಳು

ಹಾಡಿಗಳ ಸಾಂಸ್ಕೃತಿಕ ಅಧ್ಯಯನಕ್ಕೆ ಸಂಬಂಧಿಸಿದ ಸಾಂಸ್ಕೃತಿಕ ಪದಕೋಶ, ಕ್ಷೇತ್ರಕಾರ್ಯಕ್ಕೆ ಬಳಸಿದ ಪ್ರಶ್ನಾವಳಿಯ ಮಾದರಿ, ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಮಾಹಿತಿ ಸಂಗ್ರಹಣೆಗಾಗಿ ಅವಲಂಭಿಸಿದ ವಕ್ತೃಗಳ ವಿವರ, ಪರಾಮರ್ಶನ ಸಾಹಿತ್ಯ, ಕ್ಷೇತ್ರಕಾರ್ಯ ಕೈಗೊಂಡ ಪ್ರದೇಶದ ನಕ್ಷೆ, ಜೇನುಕುರುಬರು ಮತ್ತು ಬೆಟ್ಟಕುರುಬರ ಆಚರಣೆಗಳ ಛಾಯಾಚಿತ್ರಗಳು, ಹಾಡಿಗಳಿಗೆ ಸಂಬಂಧಿಸಿದ ಮುಖ್ಯ ವಿವರಗಳ ರೇಖಾ-ಚಿತ್ರಗಳು ಮತ್ತು ಹಾಡಿಯ ಮಾದರಿಗಳ ಛಾಯಾಚಿತ್ರಗಳು ಇತ್ಯಾದಿಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ (ಡಾ); ೧೯೮೫; ಜಾನಪದ ಪರಿಶೋಧನ; ಪ್ರಜ್ವಲ ಪ್ರಕಾಶನ ಮೈಸೂರು–6

೨. ಅರವಿಂದ ಮಾಲಗತ್ತಿ (ಡಾ) (ಪ್ರ.ಸಂ); ೨೦೦೫; ಕನ್ನಡ ವಿಷಯ ವಿಶ್ವಕೋಶ; ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ; ಮೈಸೂರು ವಿಶ್ವವಿದ್ಯಾನಿಲಯ

೩. ಅಶೋಕ ಆಳ್ವ. ಕೆ (ಡಾ); ೨೦೦೩; ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ; ಪ್ರಸಾರಾಂಗ; ಮಂಗಳೂರು ವಿಶ್ವವಿದ್ಯಾನಿಲಯ

೪. ಐತಿಚಂಡ ರಮೇಶ್ ಉತ್ತಪ್ಪ; ೨೦೦೨; ಪೊಮಾಲೆ ಕುಡಿಯ; ಕರ್ನಾಟಕ ಸಾಹಿತ್ಯ ಅಕಾಡೆಮಿ; ಮಡಿಕೇರಿ

೫. ಕರೀಗೌಡ ಬೀಚನಹಳ್ಳಿ (ಸಂ); ೨೦೦೦; ಕರಕುಶಲ ಕಲೆಗಳು; ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ–೨; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ; ಹಂಪಿ

೬. ಕಾಳೇಗೌಡ ನಾಗಾವರ (ಪ್ರೊ), ಹಿ.ಚಿ. ಬೋರಲಿಂಗಯ್ಯ (ಪ್ರೊ) (ಸಂ); ೨೦೧೨; ಗಿರಿಜನ ಕಾವ್ಯ

೭. ಕೇಶವನ್ ಪ್ರಸಾದ್ ಕೆ. ಮರಟ್ಟಿ, ಗಂಗಾಧರ ದೈವಜ್ಞ (ಸಂ); ೨೦೦೯; ಬುಡಕಟ್ಟು ಅಧ್ಯಯನ ಸಂಪುಟ–೬, ಸಂಚಿಕೆ ೧; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೮. ಕೋಸಾಂಬಿ ಡಿ.ಡಿ; ಟಿ.ಎಸ್. ವೇಣುಗೋಪಾಲ್, ಶೈಲಜಾ (ಅನು); ೨೦೧೧; ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ (ಚಾರಿತ್ರಿಕ ರೂಪುರೇಷೆ); ಚಿಂತನ ಪುಸ್ತಕ ಜಯನಗರ; ಬೆಂಗಳೂರು

೯. ಕೊಡಗು ಜಿಲ್ಲೆಯ ಅಂಕಿ ಅಂಶಗಳ ನೋಟ; ೨೦೧೫–೧೬; ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ, ಜಿಲ್ಲಾ ಸಂಕೀರ್ಣ; ಕೊಡಗು ಜಿಲ್ಲೆ; ಮಡಿಕೇರಿ

೧೦. ಕೃಷ್ಣಮೂರ್ತಿ ಎಂ.ಜಿ (ಡಾ) (ಸಂ); ೨೦೦೬; ಇತಿಹಾಸ ದರ್ಶನ ಸಂಪುಟ ೨೧; ಕರ್ನಾಟಕ ಸಾಹಿತ್ಯ ಅಕಾಡೆಮಿ (ರಿ); ಬೆಂಗಳೂರು

೧೧. ಕೃಷ್ಣಮೂರ್ತಿ. ಎಂ.ಜಿ (ಡಾ) (ಸಂ); ೨೦೦೯; ಇತಿಹಾಸ ದರ್ಶನ ಸಂಪುಟ ೨೪; ಕರ್ನಾಟಕ ಸಾಹಿತ್ಯ ಅಕಾಡೆಮಿ (ರಿ); ಬೆಂಗಳೂರು

೧೨. ಗಣೇಶ್.ಹೆಚ್.ಎಂ(ಡಾ); ೨೦೧೦; ಕಾಡು, ಬೆಟ್ಟಕುರುಬರ ಆಹಾರ ಪದ್ಧತಿ; ಕರ್ನಾಟಕದ ಬುಡಕಟ್ಟು ಸಮುದಾಯಗಳು; ತಾರಿಹಳ್ಳಿ ಹನುಮಂತಪ್ಪ (ಡಾ) (ಸಂ); ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ಹಂಪಿ

೧೩. ಗುಣಪಾಲ್ ಶೆಟ್ಟಿ (ಸಂ); ೨೦೧೨; ಮೌನ ಮಾತಾದಾಗ (ಕೊರಗ ಸಮುದಾಯದ ಒಂದು ಒಳನೋಟ); ಸಮಗ್ರ ಗ್ರಾಮೀಣ ಆಶ್ರಮ; ಪೆರ್ನಾಲ್-ಉಡುಪಿ

೧೪. ಚಂದ್ರಕಾಂತ ಪೋಕಳೆ; ೨೦೧೬; ನಮ್ಮ ಸಂಸ್ಕೃತಿ (ಸಂಸ್ಕೃತಿ ಚಿಂತನೆಯ ಬಿಡಿ ಬರಹಗಳು); ನವಕರ್ನಾಟಕ ಪಬ್ಲಿಕೇಶನ್ಸ್ ಪ್ರೈವೆಟ್ ಲಿಮಿಟೆಡ್; ಬೆಂಗಳೂರು

೧೫. ಡಿ.ವಿ.ಜಿ; ೧೯೫೩; ಸಂಸ್ಕೃತಿ; ಸಾಹಿತ್ಯ ಪ್ರಕಾಶನ ಕೊಪ್ಪೀಕರ್ ಬೀದಿ; ಹುಬ್ಬಳ್ಳಿ

೧೬. ನಡಿಕೇರಿಯಂಡ ಚಿಣ್ಣಪ್ಪ; ೨೦೦೬; ಪಟ್ಟೋಳೆ ಪಳಮೆ; ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ; ಮಡಿಕೇರಿ

೧೭. ನಾಗರಾಜ್ ಎಂ.ಜಿ (ಡಾ); ಕೃಷ್ಣಮೂರ್ತಿ.ವಿ (ಡಾ) (ಸಂ); ೨೦೧೧; ಇತಿಹಾಸ ದರ್ಶನ ಸಂಪುಟ ೨೬; ಕರ್ನಾಟಕ ಇತಿಹಾಸ ಅಕಾಡೆಮಿ (ರಿ); ಬೆಂಗಳೂರು

೧೮. ನಾಗರಾಜ್ ಎಂ.ಜಿ (ಡಾ); ೨೦೧೦; ಕೊಡಗಿನ ಸಾಂಸ್ಕೃತಿಕ ಜಾನಪದ ನೆಲೆಗಳು; ಕನ್ನಡ ಸಾಹಿತ್ಯ ಪರಿಷತ್ತು ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ; ಬೆಂಗಳೂರು

೧೯. ನಾಯಕ ಎನ್.ಆರ್ (ಡಾ); ೨೦೧೨; ಹಾಲಕ್ಕಿ ಒಕ್ಕಲಿಗರು ಒಂದು ಸಾಂಸ್ಕೃತಿಕ ಅಧ್ಯಯನ; ಗೋಧೂಳಿ ಪ್ರಕಾಶನ ತುಂಗಾನಗರ, ಬೆಂಗಳೂರು

೨೦. ನಿಂಗಪ್ಪ ಮುದೇನೂರು (ಡಾ); ೨೦೦೫; ಸಂಸ್ಕೃತಿ ದರ್ಶನ; ಸೂರ್ಯ ಪ್ರಕಾಶನ ಮಲ್ಲಾಡಿಹಳ್ಳಿ; ಚಿತ್ರದುರ್ಗ ಜಿಲ್ಲೆ

೨೧. ಪರಮಶಿವಯ್ಯ ಜೀ.ಶಂ (ಡಾ) (ಪ್ರ.ಸಂ); ೧೯೯೩; ಜಾನಪದ ಗಂಗೋತ್ರಿ ಸಂಪುಟ ೬ ಸಂಚಿಕೆ ೨; ಕರ್ನಾಟಕ ಜಾನಪದ ಅಕಾಡೆಮಿ; ಬೆಂಗಳೂರು

೨೨. ಪಾಲ್ತಾಡಿ ರಾಮಕೃಷ್ಣ ಆಚಾರ್ (ಡಾ); ೧೯೯೯; ಸಂವಹನ ಮಾಧ್ಯಮವಾಗಿ ಜನಪದ ಕುಣಿತಗಳು; ಪ್ರಸಾರಾಂಗ; ಮಂಗಳೂರು ವಿಶ್ವವಿದ್ಯಾನಿಲಯ

೨೩. ಪ್ರಭಾಕರ ಎ.ಎಸ್; ೨೦00; ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು (ಬುಡಕಟ್ಟು ಅಧ್ಯಯನ ಮಾಲೆ-3; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೨೪. ಪ್ರಭಾಕರ ಎ.ಎಸ್(ಡಾ)(ಸಂ); ೨೦೦೬; ಆದಿವಾಸಿ ಆಖ್ಯಾನ (ಸಮುದಾಯಗಳ ಅಧ್ಯಯನಕ್ಕೊಂದು ಆಕರ); ಸಿದ್ಧಾರ್ಥ ಪ್ರಕಾಶನ; ಹೊಸಪೇಟೆ

೨೫. ಪ್ರಭಾಕರ ಎ.ಎಸ್ (ಡಾ), ಗಂಗಾಧರ ದೈವಜ್ಞ (ಡಾ) (ಸಂ); ೨೦೧೬; ಬುಡಕಟ್ಟು ಅಧ್ಯಯನ: ತಾತ್ವಿಕ ನೆಲೆಗಳು; ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ; ವಿದ್ಯಾರಣ್ಯ

೨೬. ಬೋರಲಿಂಗಯ್ಯ ಹಿ.ಚಿ (ಡಾ); ೧೯೯೧; ಗಿರಿಜನ ನಾಡಿಗೆ ಪಯಣ; ರಾಗಿರೊಟ್ಟಿ ಪ್ರಕಾಶನ ಬೆಂಗಳೂರು

೨೭. ಬೋರಲಿಂಗಯ್ಯ ಹಿ.ಚಿ (ಡಾ); ೧೯೯೬; ಕರ್ನಾಟಕ ಜನಪದ ಕಲೆಗಳ ಕೋಶ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ; ವಿದ್ಯಾರಣ್ಯ

೨೮. ಬೋರಲಿಂಗಯ್ಯ ಹಿ.ಚಿ (ಡಾ); ೨೦೦೦; ಬುಡಕಟ್ಟು ದೈವಾರಾಧಾನೆ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೨೯. ಬೋರಲಿಂಗಯ್ಯ ಹಿ.ಚಿ (ಡಾ); ೨೦೦೧; ವಿಸ್ಮೃತಿ ಮತ್ತು ಸಂಸ್ಕೃತಿ; ಸಿ.ವಿ.ಜಿ ಪಬ್ಲಿಕೇಷನ್ಸ್; ಬೆಂಗಳೂರು

೩೦. ಬೋರಲಿಂಗಯ್ಯ ಹಿ.ಚಿ (ಡಾ); ೧೯೯೩; ಸಿದ್ದಿಯರ ಸಂಸ್ಕೃತಿ; ಕರ್ನಾಟಕ ಸಾಹಿತ್ಯ ಅಕಾಡೆಮಿ; ಕನ್ನಡ ಭವನ ಜೆ.ಸಿ ರಸ್ತೆ; ಬೆಂಗಳೂರು

೩೧. ಬೋರಲಿಂಗಯ್ಯ ಹಿ.ಚಿ (ಡಾ), ಪ್ರಭಾಕರ ಎ.ಎಸ್ (ಸಂ); ೨೦೦೪; ಬುಡಕಟ್ಟು ಅಧ್ಯಯನ ೨; ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೩೨. ಮಂಜುನಾಥ ಬೇವಿನಕಟ್ಟೆ (ಪ್ರೊ); ೨೦೦೭; ಆದಿವಾಸಿ (ಸಂಸ್ಕೃತಿಯ ಸ್ಥಿತಿಗತಿ); ಸಾಹಿತ್ಯ ನಂದನ ರಾಜಾಜಿನಗರ; ಬೆಂಗಳೂರು

೩೩. ಮಲ್ಲೇಪುರಂ ಜಿ.ವೆಂಕಟೇಶ (ಸಂ); ೨೦೦೨; ದ್ರಾವಿಡ ಅಧ್ಯಯನ ಸಂಪುಟ ೧ ಸಂಚಿಕೆ ೨; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೩೪. ಮಾಧವ ಪೆರಾಜೆ (ಡಾ) (ಸಂ); ೨೦೧೦; ದ್ರಾವಿಡ ಅಧ್ಯಯನ ಸಂಪುಟ ೯ ಸಂಚಿಕೆ ೧– ೨; ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೩೫. ಮಾಧವ ಪೆರಾಜೆ (ಡಾ) (ಸಂ); ೨೦೧೧; ದ್ರಾವಿಡ ಅಧ್ಯಯನ ಸಂಪುಟ ೧೦ ಸಂಚಿಕೆ ೧; ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೩೬. ಮಾಸ್ತಿ ವೆಂಕಟೇಶ ಅಯ್ಯಂಗಾರ್; ೧೯೫೬; ಚಿಕವೀರ ರಾಜೇಂದ್ರ; ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಲಯ ಟ್ರಸ್ಟ್; ಮಾಸ್ತಿಮನೆ; ಗವಿಪುರದ ವಿಸ್ತರಣ; ಬೆಂಗಳೂರು

೩೭. ಮುತ್ತಯ್ಯ ಎಸ್.ಎಂ (ಡಾ); ೨೦೧೧; ಬುಡಕಟ್ಟು ಬೆರಗು; ಅನ್ನಪೂರ್ಣ ಪಬ್ಲಿಷಿಂಗ್ ಹೌಸ್; ಮಾಗಡಿ ಮುಖ್ಯ ರಸ್ತೆ; ಬೆಂಗಳೂರು

೩೮. ಮುರಿಗೆಪ್ಪ.ಎ (ಡಾ) (ಪ್ರ.ಸಂ); ೨೦೧೧; ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ ೧; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ಹಂಪಿ

೩೯. ಮುರಿಗೆಪ್ಪ.ಎ (ಡಾ) (ಪ್ರ.ಸಂ); ೨೦೧೧; ದಕ್ಷಿಣ ಭಾರತೀಯ ಜಾನಪದ ಕೋಶ ಸಂಪುಟ ೨; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ಹಂಪಿ

೪೦. ಮಂಗಳ ಬಿ.ಎಂ; ೨೦೦೬; ಬುಡಕಟ್ಟು ಜನಾಂಗಗಳಲ್ಲಿ ಜನಪದ ವೈದ್ಯ ಒಂದು ಅಧ್ಯಯನ (ಸಂಶೋಧನಾ ಮಹಾಪ್ರಬಂಧ); ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ; ಬೆಂಗಳೂರು

೪೧. ಮಲ್ಲಿಕಾರ್ಜುನ. ಭ; ೧೯೯೮; ಎರವರು; ಕರ್ನಾಟಕ ಬುಡಕಟ್ಟುಗಳು, ಪ್ರೊ.ಎಚ್.ಲಕ್ಕಪ್ಪಗೌಡ (ಸಂ); ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೪೨. ಮೇತ್ರಿ ಕೆ.ಎಂ, ಡಾ.ಚೆಲವರಾಜು (ಸಂ); ೨೦೦೬; ಬುಡಕಟ್ಟು ಅಧ್ಯಯನ ಸಂಪುಟ ೩, ಸಂಚಿಕೆ ೧; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೪೩. ಮೇತ್ರಿ ಕೆ.ಎಂ, ಡಾ.ಚೆಲವರಾಜು (ಸಂ); ೨೦೦೬; ಬುಡಕಟ್ಟು ಅಧ್ಯಯನ ಸಂಪುಟ ೩, ಸಂಚಿಕೆ ೨; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೪೪. ಮೇತ್ರಿ ಕೆ.ಎಂ, ಡಾ.ಚೆಲವರಾಜು (ಸಂ); ೨೦೦೭; ಬುಡಕಟ್ಟು ಅಧ್ಯಯನ ಸಂಪುಟ ೪, ಸಂಚಿಕೆ ೧-೨; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೪೫. ಮೈತ್ರಿ ಕೆ.ಎಂ; ೨೦೧೪; ಆದಿವಾಸಿ ನಿರಾಕರಣೆಯ ರಾಜಕೀಯ; ಅರುಹು-ಕುರುಹು; ಸಂಪುಟ ೫ ಸಂಚಿಕೆ ೨೦, ಜನವರಿ- ಮಾರ್ಚ್; ಮೌನ, ೩೬೬, ನವಿಲು ರಸ್ತೆ, ಕುವೆಂಪುನಗರ; ಮೈಸೂರು

೪೬. ವೆಂಕಟೇಶ್.ಸಿ (ಸಂ); ೨೦೦೬; ದ್ರಾವಿಡ ಅಧ್ಯಯನ ಸಂಪುಟ ೫ ಸಂಚಿಕೆ ೨; ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾನಿಲಯ; ಹಂಪಿ

೪೭. ರಹಮತ್ ತರೀಕೆರೆ; ೨೦೦೪; ಸಾಂಸ್ಕೃತಿಕ ಅಧ್ಯಯನ; ಕರ್ನಾಟಕ ಸಾಹಿತ್ಯ ಅಕಾಡೆಮಿ; ಕನ್ನಡ ಭವನ, ಜೆ.ಸಿ ರಸ್ತೆ; ಬೆಂಗಳೂರು

೪೮. ರಾಮಕೃಷ್ಣ.ಆರ್(ಡಾ); ೨೦೦೭; ಸಾಂಸ್ಕೃತಿಕ ಮಾನವಶಾಸ್ತ್ರ; ರಿಯಾ ಎಜೆನ್ಸೀಸ್, ಮೈಸೂರು

೪೯. ರೆವರೆಂಡ್ ಜಿ. ರಿಕ್ಟರ್; (ಕನ್ನಡಕ್ಕೆ) ಲೋಕೇಶ್ ಕೆ.ಎಂ (ಡಾ) (ಸಂ); ೨೦೧೧; ಕೊಡಗು ಪ್ರಾಂತ್ಯದಲ್ಲಿ ಕಂಡುಬರುವ ಜಾತಿಗಳು ಮತ್ತು ಬುಡಕಟ್ಟು ಜನಾಂಗಗಳ ವೃತ್ತಾಂತ ಸಂಹಿತೆ; ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ

೫೦. ವಿಜಯ ತಂಬಡ ಪೂಣಚ್ಚ; ೨೦೦೪; ಪಳಮೆ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ಹಂಪಿ

೫೧. ವಿಜಯ ತಂಬಡ ಪೂಣಚ್ಚ (ಸಂ); ೨೦೦೫; ಕೊಡಗು ವಿವರಣೆ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ; ಹಂಪಿ

೫೨. ವೀರಣ್ಣ ದಂಡೆ (ಸಂ); ೧೯೯೯; ಜಾನಪದಶಾಸ್ತ್ರ ಸಿದ್ಧಾಂತಗಳು; ನೆಲಮನೆ ಪ್ರಕಾಶನ ರಂಗನಾಥನಗರ, ಶ್ರೀರಂಗಪಟ್ಟಣ; ಮಂಡ್ಯ ಜಿಲ್ಲೆ

೫೩. Appaih P.S (Prof); 2012; A History of Kodagu; 315. 1 st Ecross, 3rdBlock, H.R.B.R Layout, st thomos town, kalyananagar; Bangalore

೫೪. Benjamin Lewis Rice; 1878; Mysore and Coorg Vol.III; Bangalore Goverment Press

೫೫. Graeter.A; 1869; Description of Coorg; c. stolz, Basel Mission press; Mangalore

೫೬. Richter .Reo. B; 1870; Gazeteer of Coorg; b.r Publisihing corp. Dheli

೫೭. Mookonda Kushalappa; 2013; The Eearly Coorgs (The history of early Kodagu and its people); 5 Muthu kalanthy Street; triplicane; chennai

೫೮. Supendra rao.B; Lokesh K.M (E); 1998; Coorg invented (Ninteeth century Europeon writing on kodagu); forum for kodagu studies; madikeri

ಪರಾಮರ್ಶನ ಲೇಖನಗಳು

೧. ಕಾಳೇಗೌಡ ನಾಗಾವರ, ಎನ್ ಹುಚ್ಚಪ್ಪ ಮಾಸ್ತರ್ (ಸಂ); ೨೦೦೦; ಗಿರಿಜನ ಸಂಸ್ಕೃತಿ; ತೀ.ನಂ ಶಂಕರನಾರಾಯಣ; ಬುಡಕಟ್ಟುಗಳ ಲಕ್ಷಣ ಮತ್ತು ಸ್ವರೂಪ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೨. ಕಿಕ್ಕೇರಿ ನಾರಾಯಣ; ೧೯೯೮; ಜೇನುಕುರುಬರು; ಸಂ. ಪ್ರೊ.ಎಚ್.ಲಕ್ಕಪ್ಪಗೌಡ (ಸಂ); ಕರ್ನಾಟಕ ಬುಡಕಟ್ಟುಗಳು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ; ಬೆಂಗಳೂರು

೩. ಕೇಶವನ್ ಪ್ರಸಾದ್ ಕೆ. ಮರಟ್ಟಿ, ಗಂಗಾಧರ ದೈವಜ್ಞ (ಸಂ); ೨೦೦೮ ; ಬುಡಕಟ್ಟು ಅಧ್ಯಯನ ಸಂಪುಟ–೫, ಸಂಚಿಕೆ ೨; ಶ್ರೀಕಾಂತ ನಾಯಕ; ಮೈಸೂರು ಜಿಲ್ಲೆಯ ಜೇನುಕುರುಬರ ಆರ್ಥಿಕ ಜೀವನ ಮತ್ತು ರಾಜ್ಯ ಅಭಿವೃದ್ಧಿ ಯೋಜನಾ ಕ್ರಮಗಳು; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ

೪. ತಾರಿಹಳ್ಳಿ ಹನುಮಂತಪ್ಪ (ಸಂ);೨೦೧೦; ಕರ್ನಾಟಕದ ಬುಡಕಟ್ಟು ಸಮುದಾಯಗಳು; ಗಣೇಶ್ ಹೆಚ್.ಎಂ; ಬೆಟ್ಟಕುರುಬರ ಆಹಾರ ಪದ್ಧತಿ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ

೫. ದೇವೇಂದ್ರಕುಮಾರ ಹಕಾರಿ, ಸಂದ್ಯಾರೆಡ್ಡಿ ಕೆ.ಆರ್ (ಸಂ); ೨೦೦೦; ಗ್ರಾಮೀಣ ಬೇಟೆಗಳು; ಐನಂಡ ಎಂ. ಧನು; ಕೊಡಗಿನಲ್ಲಿ ಪ್ರಾಣಿ ಬೇಟೆ; ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೬. ದೇವೇಂದ್ರಕುಮಾರ ಹಕಾರಿ, ಸಂದ್ಯಾರೆಡ್ಡಿ ಕೆ.ಆರ್ (ಸಂ); ೨೦೦೦; ಗ್ರಾಮೀಣ ಬೇಟೆಗಳು; ರಾಮಣ್ಣ ಯು.ಎಸ್; ಮಲೆನಾಡಿನಲ್ಲಿ ಪ್ರಾಣಿ ಬೇಟೆ; ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೭. ದೇವೇಂದ್ರಕುಮಾರ ಹಕಾರಿ, ಸಂದ್ಯಾರೆಡ್ಡಿ ಕೆ.ಆರ್ (ಸಂ); ೨೦೦೦; ಗ್ರಾಮೀಣ ಬೇಟೆಗಳು; ಶೋಭ ಕೆ.ಎಸ್; ಕೊಡಗಿನಲ್ಲಿ ಜೇನು ಬೇಟೆ; ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೮. ಪ್ರಬಾಕರ.ಎ.ಎಸ್ (ಸಂ); ೨೦೦೬; ಆದಿವಾಸಿ ಆಖ್ಯಾನ ಸಮುದಾಯಗಳ ಅಧ್ಯಯನಕ್ಕೊಂದು ಆಕರ; ಹಿ.ಚಿ ಬೋರಲಿಂಗಯ್ಯ; ಅರಣ್ಯದೊಳಗಿನ ಬುಡಕಟ್ಟುಗಳು: ಒಂದು ವಿವೇಚನೆ; ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೯. ಮೇತ್ರಿ ಕೆ.ಎಂ, ಡಾ.ಚೆಲವರಾಜು; ೨೦೦೭; ಬುಡಕಟ್ಟು ಅಧ್ಯಯನ ಸಂಪುಟ ೪, ಸಂಚಿಕೆ ೧–೨; ರಾಜು.ಜೆ.ಎಂ; ಜೇನುಕುರುಬರ ಪರಂಪರೆ ಮತ್ತು ಆಧುನಿಕತೆ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾನಿಲಯ ಹಂಪಿ

೧೦. ಲಕ್ಕಪ್ಪಗೌಡ ಎಚ್. (ಸಂ); ೧೯೯೮; ಕರ್ನಾಟಕ ಬುಡಕಟ್ಟುಗಳು; ನಾಗಣ್ಣ. ಡಿ; ಕುಡಿಯರು–ಮಲೆಕುಡಿಯರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

೧೧. ಲಕ್ಕಪ್ಪಗೌಡ. ಎಚ್ (ಸಂ); ೧೯೯೮; ಕರ್ನಾಟಕ ಬುಡಕಟ್ಟುಗಳು; ಮಲ್ಲಿಕಾರ್ಜುನ. ಭ; ಎರವರು; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು

೧೨. ಲಕ್ಷ್ಮೀಪತಿ ಕೋಲಾರ (ಸಂ); ೨೦೧೪; ಲೋಕ ಜಾನಪದ; ಜೇನುಕುರುಬ: ಕೊಂಟುಪೂಜೆ ಮತ್ತು ಅಣಪೆ ನೂರಾಳೊಡೆಯ, (ಕರ್ನಾಟಕ ಜಾನಪದ ಅಕಾಡೆಮಿ, ತ್ರೈಮಾಸಿಕ, ಅಕ್ಟೋಬರ್–ಡಿಸೆಂಬರ್ – ಸಂಪುಟ ೦೧: ಸಂಚಿಕೆ ೦೪), ಬೆಂಗಳೂರು

೧೩. ಶಾಲಿನಿ ರಘುನಾಥ (ಸಂ); ೨೦೧೬; ಅರಣ್ಯವಾಸಿ ಜಾನಪದ; ಗಂಗಾಧರ ದೈವಜ್ಞ; ಅರಣ್ಯವಾಸಿಗಳ ಪಾರಂಪರಿಕ ಆಹಾರ ಪದ್ಧತಿ; ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ

೧೪. Nadeem Hasnain (Prof); Tribe and Caste; Social Anthropology University of Luknow